ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in around 10 countries

ಸಂಪುಟ ೨, ಸಂಚಿಕೆ ೭, ಡಿಸೆಂಬರ್ ೨೦೧೪

Find us on: facebook®

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಈಗಿನ ಸುದ್ದಿ ... ಪು. ೧

ಸಂಪಾದಕೀಯ ... ಪು. ೩

ಮೋದಿ ಭೇಟಿಯ ವರದಿ ... ಪು. ೪

ಚಿಲುಮೆಯ ಒಳಗೆ

ಸುಭಾಷಿತ – ಲೇಖನ ... ಪು. ೬

ವಿಚಾರ-ವಿಹಾರ ... ಪು. ೮

ರಾಂ ರಾಮ! ಹಾಸ್ಯ ... ಪು. ೯

ಚಿಲುಮೆಯ ಒಳಗೆ

ಕಥಾಚಿಲುಮೆ ... ಪು. ೧೨

ರೆಸಿಪಿ ಕೊಡ್ತೀರಾ! ... ಪು. ೧೨

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೩

ಚಿಲುಮೆಯ ಒಳಗೆ

ಪದ ಪುಂಜ/ರಂಗೋಲಿ ... ಪು. ೧೪

ಕರ್ನಾಟಕ -ರಾಜವಂಶಗಳು ... ಪು. ೧೫

ಚಿಲುಮೆಯ ಒಳಗೆ

ವಿಜ್ಞಾನ ... ಪು. ೧೬

ಅಲ್ಲಲ್ಲಿ ಏನೇನು ... ಪು. ೧೬

ಓದುಗರಿಗೆ ಹೊಸವರ್ಷ ೨೦೧೫ ರ ಶುಭಾಶಯಗಳು

ಈಗಿನ ಸುದ್ದಿ

ಸಿಡ್ನಿಯಲ್ಲಿ ಕನಕ ನಮನ

ಸಿಡ್ನಿಯಲ್ಲಿ ಕಳೆದ ತಿಂಗಳು ನವೆಂಬರ್ 30ರಂದು 'ಕನಕ ನಮನ' ಎನ್ನುವ ಒಂದು ಕಾರ್ಯಕ್ರಮವನ್ನು ಬಹಳ ಆತ್ಮೀಯ ವಾತಾವರಣದಲ್ಲಿ ಆಚರಿಸಲಾಯಿತು. ಇದುವರೆಗೂ ಪುರಂದರ ಆರಾಧನೆ, ತ್ಯಾಗರಾಜ ಆರಾಧನೆ ಬಗ್ಗೆ ಅಷ್ಟೇ ಕೇಳಿದ್ದ ಸಿಡ್ನಿ ಕನ್ನಡಿಗರಿಗೆ, ಕನಕನಮನದ ಮೂಲಕ ಕನಕದಾಸರ ಬಗ್ಗೆ ತಿಳಿದುಕೊಳ್ಳುವ ಮತ್ತು ಅವರ ಕೃತಿಗಳನ್ನು ಕೇಳುವ ಅವಕಾಶ ಒದಗಿತು. ಕಿರಿಯರು ಹಿರಿಯರಿಂದ ಹಿಡಿದು ನುರಿತ ಗಾಯಕರಾದಿಯಾಗಿ ಎಲ್ಲರೂ ಬಹಳ ಆಸ್ಥೆಯಿಂದ ಕೀರ್ತನೆಗಳನ್ನು ಪ್ರಸ್ತುತಪಡಿಸಿದರು.

ಶ್ರೀ ಶ್ರೀನಿವಾಸ ಅವರ 'ಭಜೋರೆ ಹನುಮಂತಂ' ಹಾಡಿನಿಂದ ಶುರುವಾಗಿ ನಂತರ ಶ್ರೀಮತಿ ಲಕ್ಷ್ಮಿ, ಶುಭ ಮತ್ತು ಪ್ರಣವ ಜೊತೆಯ ತಬಲಾ ದೊಂದಿಗೆ 'ನೀ ಮಾಯೆಯೊಳಗೋ' ಹಾಡನ್ನು ಅರ್ಥಪೂರ್ಣವಾಗಿ ಹಾಡಿದರು. ಕುಮಾರಿ ಸಿಂಧು ಹಾಡಿದ 'ದಾಸನಾಗಬೇಕು' ಶ್ರೀ ಶಂಕರ್ ಮಧ್ಯಸ್ಥ ಅವರ 'ಭಜಿಸಿ ಬದುಕೆಲೋ ಮಾನವ', ವಿಜು ಪಡಕಿ ಅವರು ಹಾಡಿದ 'ಇಷ್ಟು ದಿನ ವೈಕುಂಠ' ಎಲ್ಲವೂ ತಲೆದೂಗುವಂತಿತ್ತು. ಶ್ರೀಮತಿ ಸೌಮ್ಯ ಅವರು 'ದಾಸ ದಾಸರಮನೆಯ ದಾಸ ನಾನು' ಎಂಬ ಹಾಡಿನ ಕನಕದಾಸರ ವಿನೀತ ಭಾವವನ್ನು ಸೊಗಸಾಗಿ ಹಾಡಿದರೆ, ಶ್ರೀಮತಿ ಚಂದ್ರಿಕಾ ಅವರು ತಮ್ಮ ದಿಟ್ಟ ಸ್ವರದಲ್ಲಿ 'ಯಾರು ಕೊರೆದಿಟ್ಟರು ಈ ಕನ್ನ' ಎಂಬ ಹಾಡನ್ನು ಹಾಡಿದರು. ಶ್ರೀ ಶ್ರೀನಿವಾಸ್ ಕನಕದಾಸರ ಭಕ್ತಿಪದ್ಯ ಗ್ರಂಥವಾದ 'ಹರಿಭಕ್ತಿಸಾರ'ದ ಕೆಲವು ಭಾಗಗಳನ್ನು ಗಮಕ ಶೈಲಿಯಲ್ಲಿ ಹಾಡಿದರು. ಶ್ರೀಮತಿ ಅಪರ್ಣ ತಾವೇ ರಾಗ ಸಂಯೋಜಿಸಿದ 'ನಾನು ನೀನು ಎನ್ನದಿರು ಹೀನಮಾನವ' ಎನ್ನುವ ಹಾಡನ್ನು ಬಹಳ ಸುಶ್ರಾವ್ಯವಾಗಿ ಹಾಡಿದರು. ಶ್ರೀಮತಿ ಪ್ರಿಯ, ಜಯಂತಿ ಮತ್ತು ಪೂರ್ಣಿಮಾ ಅವರು ಕನಕದಾಸರ ಜನಪ್ರಿಯ ಕೃತಿಗಳಾದ 'ಬಾರೋ ಕೃಷ್ಣಯ್ಯ', 'ತೊರೆದು ಜೀವಿಸಬಹುದೇ' ಮತ್ತು 'ಬದುಕಿದೆನು ಬದುಕಿದೆನು' ಹಾಡುಗಳನ್ನು ಶ್ರೀನಾಥ್ ಅವರ ತಬಲಾ ಮತ್ತು ರಾಮ ಕುಡುವ ಅವರ ಹಾರ್ಮೋನಿಯಂನೊಂದಿಗೆ ಹಾಡಿದರು . ರಾಮ ಕುಡುವ ಅವರೇ ಮತ್ತೊಂದು ಚಿರಪರಿಚಿತ ಹಾಡು 'ತಲ್ಲಣಿಸದಿರು ಕಂಡ್ಯ ತಾಳುಮನವೆ' ಸೊಗಸಾಗಿ ಹಾಡಿದರು. ಕೊನೆಗೆ ಶ್ರೀ ನಾಗಶೈಲ ಅವರಿಂದ 'ಈಶ ನಿನ್ನ ಚರಣ ಭಜನೆ' ಎಂಬ ಮಂಗಳಗೀತೆಯೊಂದಿಗೆ ಕನಕನಮನ ಮುಗಿಯಿತಾದರೂ ಕನಕದಾಸರು ಬಾಳಿ ಬದುಕಿದ ಕಾಲಘಟ್ಟದ ಬಗ್ಗೆ ಒಂದಿಷ್ಟು ಯೋಚಿಸುವಂತಾಯಿತು.

ಮುಂದಿನ ಪುಟ ನೋಡಿ ...

ಕೇಳೋಣ

ಕನಕದಾಸರ ಬಗ್ಗೆ ಕರ್ನಾಟಕ ಸರ್ಕಾರ ಸಿದ್ಧಪಡಿಸಿರುವ ಸಾಕ್ಷ್ಯ ಚಿತ್ರ ವೀಕ್ಷಿಸಲು ಮೇಲಿನ ಚಿತ್ರವನ್ನು ಕ್ಲಿಕ್ ಮಾಡಿ (Click picture to view)

ಮೋದಿ ಭೇಟಿಯ ವರದಿ ಪುಟ ೪ ರಲ್ಲಿ ...



ಡಾ|| ರಾಜ್ ಕುಮಾರ್ ಅಭಿನಯದ ಭಕ್ತ ಕನಕದಾಸ ಚಿತ್ರದ "ಕುಲ ಕುಲ ಕುಲವೆಂದು ..." ಹಾಡು ನೋಡಲು ಚಿತ್ರ ಕ್ಲಿಕ್ ಮಾಡಿ (Click picture to view)

ನೋಡೋಣ

ಈಗಿನ ಸುದ್ದಿ

ಸಿಡ್ನಿಯಲ್ಲಿ ಕನಕ ನಮನ

ಶ್ರೀಯುತರಾದ ಅಶೋಕ್, ನಾಗಶಯನ, ಹಾಗು ಸುದರ್ಶನ್ ಅವರಿಂದ ಕನಕದಾಸರ ಜೀವನ, ಸಾಹಿತ್ಯ ರಚನೆ, ಮತ್ತು ಅವರ ಬಗೆಗಿನ ಐತಿಹ್ಯಗಳ ಬಗ್ಗೆ ಇರುವ ವಿವಾದಗಳ ಸ್ಥೂಲ ಪರಿಚಯವೂ ಸಹ ಆಯಿತು. ಶ್ರೀ ನಾಗಶಯನ ಅವರು ಹೇಳುವಂತೆ 'ರಾಮಧಾನ್ಯ ಚರಿತೆ' ಯಲ್ಲಿ ಬರುವ ಅಕ್ಕಿ ರಾಗಿಯ ನಡುವಿನ ಸಂಭಾಷಣೆ ಸಿರಿವಂತರ ಮತ್ತು ಬಡವರ ನಡುವೆ ಇರುವ ಅಂತರದ ಬಗೆಗಿನ ಚರ್ಚೆಯಾಗಿ ಇಂದಿಗೂ ಪ್ರಸ್ತುತವಾಗಿದೆ. ಯಾವುದೇ ಐತಿಹ್ಯಗಳ ಮೇಲಿನ ನಂಬಿಕೆಗಳು ಸಾಮಾಜಿಕ ಮತ್ತು ರಾಜಕೀಯ ಮಟ್ಟದಲ್ಲಿ ದುರುಪಯೋಗವಾಗುವ ಅಪಾಯದ ಬಗ್ಗೆ ಎಚ್ಚರವಿರಬೇಕು ಎನ್ನುವ ಸುದರ್ಶನ್ ಅವರ ಮಾತು ಇಲ್ಲಿ ಗಮನಾರ್ಹ.

ಪುರಂದರದಾಸರ ಸಮಕಾಲೀನರಾಗಿದ್ದ ಕನಕದಾಸರಿಗೆ ದಾಸಸಾಹಿತ್ಯದಲ್ಲಿ ಒಂದು ವಿಶೇಷ ಸ್ಥಾನವಿದ್ದರೂ ಜಾತಿಯ ವಿಷಯದಲ್ಲಿ ಸಮಾಜದ ತಾರತಮ್ಯವನ್ನು ಸ್ವತಹ ಅನುಭವಿಸಿದವರು. ಸಮಾಜದ ಓರೆಕೋರೆಗಳನ್ನು ದಿನನಿತ್ಯ ಕಂಡವರು. ಆದನ್ನೇ ಅವರು ತಮ್ಮ ಕೀರ್ತನೆಗಳಲ್ಲಿ ಕೂಡ ಮಾರ್ಮಿಕವಾಗಿ ಹೇಳುತ್ತಾರೆ. ಕನಕದಾಸರ ಕೀರ್ತನೆಗಳಲ್ಲಿ ಕಾಣುವ ಭಕ್ತಿ, ವೈರಾಗ್ಯ ಮತ್ತು ಸಮರ್ಪಣಭಾವಗಳನ್ನು ನಾವು ಹಾಡುವುದರ ಜೊತೆಗೆ ಅವರ ಅನುಭವ ಲೋಕೋಕ್ತಿಗಳು ಸಹ ಒಂದಿಷ್ಟು ಮಾರ್ಗದರ್ಶಿಯಾಗಲಿ. ▪

ವರದಿ: ವೀಣಾ ಸುದರ್ಶನ್

ಎರಡು ತಿಂಗಳ ಪ್ರಮುಖ ದಿನಗಳು

ಡಿಸೆಂಬರ್ ಶ್ರೀ ಜಯನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ/ಪುಷ್ಯ ಮಾಸ

2 ಮಂ - ಗೀತಾ ಜಯಂತಿ, ಏಕಾದಶಿ
6 ಶ - ಶ್ರೀ ದತ್ತಾತ್ರೇಯ ಜಯಂತಿ, ಹುತ್ತರಿ ಹುಣ್ಣಿಮೆ
09 ಮಂ - ಸಂಕಷ್ಟ ಹರ ಗಣಪತಿ ಪೂಜೆ
18 ಗು ಏಕಾದಶಿ 21/22 ಎಳ್ಳಮಾವಾಸ್ಯೆ
23 ಮಂ - ಪುಷ್ಯಮಾಸ ಆರಂಭ
25 ಗು - ಕ್ರಿಸ್ಮಸ್ ಹಬ್ಬ

ಜನವರಿ ೨೦೧೫ ಶ್ರೀ ಜಯನಾಮ ಸಂವತ್ಸರ, ದಕ್ಷಿಣಾಯನ/ಉತ್ತರಾಯಣ, ಹೇಮಂತ/ಶಿಶಿರ ಋತು, ಪುಷ್ಯ /ಮಾಘ ಮಾಸ

01 ಗು - ಆಂಗ್ಲ ಹೊಸವರ್ಷದ ಮೊದಲ ದಿನ
02 ಶ - ಮಿಲದ್ ಅನ್ ನಬಿ
05 ಸೋ- ಹುಣ್ಣಿಮೆ
11 ಶ - ಏಕಾದಶಿ
15 ಗು - ಮಕರ ಸಂಕ್ರಾಂತಿ
20 ಮಂ - ಅಮಾವಾಸ್ಯೆ
21 ಬು - ಮಾಘ ಮಾಸ/ ಶಿಶಿರ ಋತು ಆರಂಭ
24 ಶ - ವಸಂತ ಪಂಚಮಿ
26 ಸೋ - ಗಣ ರಾಜ್ಯೋತ್ಸವ, 27 ಮಂ - ಏಕಾದಶಿ

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಕ್ರಿಸ್ಮಸ್ ಶುಭಾಶಯಗಳು

ಪ್ರಿಯ ಓದುಗರೇ,

ಮತ್ತೊಂದು ಕೈಸ್ತ ವರ್ಷ ಮುಗಿದು ಹೊಸ ವರ್ಷವೊಂದನ್ನು ಸ್ವಾಗತಿಸುವ ಹೊಸ್ತಿಲಿನಲ್ಲಿದ್ದೀವಿ. ಎಂದಿನಂತೆ, ಈ ವರ್ಷವೂ ಪ್ರತಿಯೊಬ್ಬರಿಗೂ ವಿಭಿನ್ನ ಅನುಭವ ನೀಡಿರುವುದು ಅವರವರ ಅನುಭವಕ್ಕೆ ಬಂದಿರುತ್ತದೆ. ನಿಮ್ಮ ಪ್ರತಿಯೊಂದು ಅನುಭವವೂ ನಿಮ್ಮ ಜೀವನದ ಸಾರ್ಥಕ್ಯತೆಯ ಹತ್ತಿರ ಹೋಗಲು ಒಂದು ಮೆಟ್ಟಿಲು ಎನ್ನುವುದು ನಮ್ಮ ಅಭಿಮತ. ಈ ದೃಷ್ಟಿಯಲ್ಲಿ, ಸೋಲು-ಗೆಲುವೆನ್ನದೆ ಪ್ರತಿ ಕ್ಷಣವನ್ನೂ ಅನುಭವಿಸಿದ ತೃಪ್ತಿ ನಿಮ್ಮದಾಗಿರಲಿ ಎಂಬ ಆಶಯ ಕೂಡ ಚಿಲುಮೆಯ ಸಮಿತಿಯಿಂದ.

ಹೊಸ ವರುಷಕ್ಕೆ "ರೆಸಲ್ಯೂಶನ್" ಹೆಸರಿನಲ್ಲಿ "ನಾನು ಹೀಗೆ ಮಾಡುತ್ತೇನೆ" ಅಥವಾ "ಇಂತಹದನ್ನು ಮಾಡುವುದಿಲ್ಲ" ಎಂದು ಒಂದಷ್ಟು ಸಂಕಲ್ಪಗಳನ್ನು ನಾವುಗಳನೇಕರು ಪ್ರತಿ ವರ್ಷ ಮಾಡುತ್ತೇವೆ. ಅದರಿಂದಾಗುವ ಒಂದು ಬಹು ಮುಖ್ಯ ಉಪಯೋಗವೆಂದರೆ, ನಾವುಗಳು ಒಂದು ನಿರ್ದಿಷ್ಟ ಗುರಿಯೆಡೆಗೆ ಸರಿಯಾಗಿ ನಡೆಯುವಂತಾಗಲು ಒಂದು ಮಾರ್ಗದ ನಿರ್ಮಾಣ. ಒಂದು ಒಳ್ಳೆಯ ಮಾರ್ಗವಿದ್ದರೆ ವಾಹನವು ಹೇಗೆ ಸರಾಗವಾಗಿ ಸಾಗಬಹುದೋ, ಹಾಗೆಯೇ ಒಂದಷ್ಟು ಒಳ್ಳೆಯ ಸಂಕಲ್ಪಗಳಿದ್ದರೆ ನಮ್ಮ ಜೀವನವನ್ನೂ, ಸರಿಯಾದ ದಿಕ್ಕಿನಲ್ಲಿ ನಡೆಸಲು ಅನುಕೂಲವಾಗುತ್ತದೆ.

ಸಂಕಲ್ಪಗಳು ಮುಖ್ಯ, ನಿಜ. ಅದಕ್ಕಿಂತಲೂ ಒಂದು ಪಟ್ಟು ಹೆಚ್ಚಿನದ್ದು, ಸಂಕಲ್ಪ ಮಾಡಿ, ಆ ಕೆಲಸವನ್ನು ಪೂರ್ಣಗೊಳಿಸಿ ಸಂತೋಷಪಡುವುದು. ಅದು ಎಂತಹ ಚಿಕ್ಕ ಸಂಕಲ್ಪವೇ ಆಗಿರಬಹುದು. ಮನೆಯ ಮುಂದೆ ಹೂತೋಟ ಮಾಡುತ್ತೀನೆಂದೋ, ಮನೆಯ ಒಳಗೆ ಶುಚಿ ಮಾಡುತ್ತೀನೆಂದೋ, ಇಲ್ಲ ಮತ್ತೊಬ್ಬರಿಗೆ ಸಹಾಯ ಹಸ್ತ ಚಾಚುತ್ತೀನೆಂದೋ ಇತ್ಯಾದಿ.

ಸಣ್ಣ ಕಾರ್ಯವೆಂದು, ನಾವು ಮಾಡಿದ ಕಾರ್ಯದಲ್ಲಿ ತೃಪ್ತಿಪಡದೆ ಬೇರೊಬ್ಬರ ಬೆಳವಣಿಗೆ ಕಂಡು ಮತ್ಸರ ಪಡುವಂತಾದರೆ ನಾವು ಮಾಡಿಕೊಂಡ ಸಂಕಲ್ಪಗಳು ವ್ಯರ್ಥವಾಗುವುದಷ್ಟೇ. ಹೀಗಾಗಿ ವರ್ಷದ ಕೊನೆಯ ಮಾಸದಲ್ಲಿರುವ ಈ ಘಳಿಗೆಯಲ್ಲಿ ನಾವು ವರ್ಷ ಪೂರ್ತಿ ಮಾಡಿದ ಒಳ್ಳೆಯ ಕೆಲಸಗಳಿಗೆ ಯಾರು ಬೆನ್ನು ತಟ್ಟದಿದ್ದರೂ, ನಾವುಗಳೇ ಬೆನ್ನು ತಟ್ಟಿಕೊಳ್ಳುವ ಮೂಲಕ ನಮಗೆ ನಾವೇ ಕ್ರಿಸ್ಮಸ್ ಗಿಫ್ಟನ್ನು ಕೊಟ್ಟಿಕೊಳ್ಳೋಣವಲ್ಲವೇ.

ಎಲ್ಲರಿಗೂ ಕ್ರಿಸ್ಮಸ್ ಹಬ್ಬದ ಶುಭ ಆಶಯಗಳು ...▪

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದ ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ಮೋದಿ ಮಾಡಿದ ಮೋಡಿ

ರೇಖ ಶಶಿಕಾಂತ್, ಸಿಡ್ನಿ

ಇಪ್ಪತ್ತೆಂಟು ವರ್ಷಗಳ ನಂತರ ಭಾರತದ ಪ್ರಧಾನ ಮಂತ್ರಿ ಆಸ್ಟ್ರೇಲಿಯಾ ದೇಶಕ್ಕೆ ಬರುವ ಯೋಜನೆ ಕೈಗೊಂಡಿದ್ದಾರೆ - ಇಷ್ಟೇ ಸುದ್ದಿ ಸಾಕಾಗಿತ್ತು ಆಸ್ಟ್ರೇಲಿಯನ್ ಭಾರತೀಯರನ್ನು ಹರ್ಷಗೊಳಿಸಲು ....!! ಆದರೆ ಸುದ್ದಿ ಅದಕ್ಕಿಂತಲೂ ಹೆಚ್ಚು ಸ್ವಾರಸ್ಯಕರವಾಗಿತ್ತು .... ಯಾಕೆ ಅಂತೀರಾ? ಪ್ರಧಾನ ಮಂತ್ರಿಯಾಗಿ ಬರುತ್ತಿರುವುದು ಯಾರು? ಶ್ರೀ ನರೇಂದ್ರ ಮೋದಿಯವರು!!! ಇಡೀ ಭಾರತ ದೇಶ ತಮ್ಮ ಹೆಮ್ಮೆಯ ಅಧ್ಯಕ್ಷ ಶ್ರೀ ಮೋದಿಯವರ ವಿಜಯವನ್ನು ಅತಿ ಉಲ್ಲಾಸದಿಂದ ಕೊಂಡಾಡುತ್ತಿರುವ ಸಮಯದಲ್ಲೇ ..... ಆಸ್ಟ್ರೇಲಿಯಾ ದೇಶಕ್ಕೆ ವಲಸೆ ಬಂದ ಭಾರತೀಯರಿಗೂ ಶ್ರೀ ಮೋದಿಯವರನ್ನು ಸಂಭ್ರಮದಿಂದ ಸ್ವಾಗತಿಸುವ, ಮನೋರಂಜನೆ ನೀಡಿ, ಎರಡೂ ದೇಶಗಳ ನಡುವಣ ಬೆಳಸಿಕೊಂಡು ಬಂದಿರುವ ಸ್ನೇಹ ಸೌಹಾರ್ದತೆಯನ್ನು ಸಾರುವ ಸದವಕಾಶ ಕಲ್ಪಿಸಿಕೊಟ್ಟ Indian Australian Community Foundation ಸಂಸ್ಥೆಗೆ, ಈ ಸಂಸ್ಥೆಯೊಂದಿಗೆ ಸಹಕರಿಸಿ ಸಮುದಾಯದ ಹದಿನಾರು ಸಾವಿರಕ್ಕೂ ಹೆಚ್ಚಿನ ಸದಸ್ಯರಿಗೆ ಟಿಕೆಟ್ ಕೊಡಿಸಿ ಸಮಾರಂಭವನ್ನು ವೀಕ್ಷಿಸಲು ಅನುವು ಮಾಡಿಕೊಟ್ಟ ಇತರ ಎಲ್ಲ ಸಮುದಾಯದ ಸಂಘ ಸಂಸ್ಥೆಗಳಿಗೆ ಎಷ್ಟು ಧನ್ಯವಾದಗಳನ್ನು ಅರ್ಪಿಸಿದರೂ ಸಾಲದು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಿಡ್ನಿ ನಗರದ 'ಲತಾ ಮಂಗೇಶ್ಕರ್' ಎಂದೇ ಹೆಸರುವಾಸಿಯಾಗಿರುವ ಶ್ರೀಮತಿ ಪುಷ್ಪ ಜಗದೀಶ್ ಅವರನ್ನು 'ವಂದೇ ಮಾತರಂ' ಹಾಡಿದ ಅವರ ಅನುಭವ ಹೇಗಿತ್ತು ಎಂದು ನಾನು ಕೇಳಿದಾಗ ಈ ರೀತಿ ವಿವರಿಸುತ್ತಾರೆ - ರೇಖಾ, ಶ್ರೀ ನರೇಂದ್ರ ಮೋದಿ ಸಿಡ್ನಿಗೆ ಬರುತ್ತಿರುವ ವಿಷಯ ಕೇಳಿದೊಡನೆ ನಾನು ಮತ್ತು ನನ್ನ ಪತಿ ಜಗದೀಶ್ ತಕ್ಷಣ ಸಂಸ್ಥೆಯನ್ನು ಸಂಪರ್ಕಿಸಿ ಟಿಕೆಟ್ ಪಡೆದೆವು. ಆದರೆ ಅದೇ ದಿನ ಸಮಾರಂಭದ ಕಾರ್ಯಕರ್ತರಲ್ಲೊಬ್ಬರಾದ ಅನಿಲ್ ಯಾದವ್ ಕರೆ ಮಾಡಿ ಒಂದು ಗೀತೆಯನ್ನು ಪ್ರಸ್ತುತ ಪಡಿಸಲು ಆಮಂತ್ರಿಸಿದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ನನಗೆ ತಿಳಿದ ದೇಶಭಕ್ತಿ ಗೀತೆಗಳನ್ನೆಲ್ಲ ಪಟ್ಟಿ ಮಾಡುತ್ತಿದ್ದಂತೆಯೇ ಅವರಿಂದ 'ವಂದೇ ಮಾತರಂ' ಹಾಡುವಂತೆ ಬಿನ್ನಹ ಬಂತು. ನನಗೆ ಹಾಡು ಹೊಸದು, ಕೇಳಿದ್ದೆ, ಆದರೆ ಅಭ್ಯಾಸ ಮಾಡಿರಲಿಲ್ಲ, ಇಂಥ ದೊಡ್ಡ ಕಾರ್ಯಕ್ರಮಕ್ಕೆ, ಇಷ್ಟು ಕಡಿಮೆ ಸಮಯದಲ್ಲಿ ಕಲಿತು ಹಾಡುವುದು ಹೇಗೋ ಏನೋ ಎಂಬುದು ದೊಡ್ಡ ಸವಾಲಾಗಿತ್ತು. ದೇವರ ಕೃಪೆಯಿಂದ ಎಲ್ಲವೂ ಸುಗಮವಾಗಿ ಸಾಗಿತು. ಜೀವನದಲ್ಲಿ ಮೊಟ್ಟಮೊದಲ ಬಾರಿಗೆ ಇಷ್ಟು ದೊಡ್ಡ ಪ್ರೇಕ್ಷಕ ಸಮೂಹದ ಮುಂದೆ ನಿಂತು ಹಾಡುವ ಅದೃಷ್ಟ ನನ್ನದಾಯಿತು. ನನಗೆ ಅತ್ಯಂತ ರೋಚಕವೆನ್ನಿಸಿದ್ದೇನೆಂದರೆ ಕಾರ್ಯಕ್ರಮಕ್ಕೆ ದೊರಕಿದ ಪ್ರಚಾರ! ವೇದಿಕೆಯ ಮೇಲಿನ ಕಾರ್ಯಕ್ರಮ ಒಂದೇ ಅಲ್ಲಾ .... ನಾವು ಅಭ್ಯಾಸ ಮಾಡುತ್ತಿದೆಗೆ ಸಹಾ ಭಾರತೀಯ ಟಿವಿ ಸಿಬ್ಬಂದಿ ಆಗಮಿಸಿ ಗಾಯಕರು, ನರ್ತಕರು, ವಾದ್ಯ ವೃಂದದವರು ಎಲ್ಲರನ್ನೂ ಸಂದರ್ಶಿಸಿ ಭಾರತದ ಕಿರುತೆರೆಯ ಮೇಲೆ ಪ್ರಸ್ತುತ ಪಡಿಸಿದ್ದಾರೆ. ಮತ್ತೆ ಒಲಿಂಪಿಕ್ Allphones Arena ದ ಶಿಸ್ತು, ರಕ್ಷಣಾ ವ್ಯವಸ್ಥೆ, ಅಚ್ಚುಕಟ್ಟಾದ ನಿರ್ವಹಣೆ ಇವೆಲ್ಲವೂ ಅತ್ಯುನ್ನತವಾಗಿದ್ದು, ಕೊಂಚ ಕೂಡ ಅಡೆ-ತಡೆಯಿಲ್ಲದೆ ಮುಂದೆ ಸಾಗಿತ್ತು. ಅಮೋಘ ನಗೆಯಿಂದ ತುಂಬಿದ ಹಬ್ಬದ ವಾತಾವರಣ ಎಲ್ಲೆಡೆ. ಒಬ್ಬ ರಾಜಕಾರಣಿಯನ್ನು ಸ್ವಾಗತಿಸಲು ಜನ ತೋರಿಸಿದ ಉತ್ಸಾಹ ಇದೇ ಮೊದಲ ಬಾರಿ ನಾನು ನೋಡಿದ್ದು. ನಂತರ ಶ್ರೀ ಮೋದಿಯವರ ಮನ ಮುಟ್ಟಿದ ಉಪನ್ಯಾಸ ಅದಿನ್ನೆಷ್ಟು ಉತ್ತೇಜಕ ಹಾಗೂ ರಂಜಕವಾಗಿತ್ತೆಂದರೆ ಒಂದು ಘಂಟೆಗೂ ಮೀರಿ ಮಾತಾಡಿದ್ದರೂ ಇಷ್ಟು ಬೇಗ ಮುಗಿದೇ ಹೋಯಿತೇ ಎಂದೆನಿಸಿತು. ಬಹಳ ವರ್ಷಗಳ ನಂತರ ಒಬ್ಬ ರಾಜಕಾರಣಿಯ ಭಾರತದ ಮೇಲಿನ ಪ್ರೇಮ ಹಾಗೂ ದೇಶಭಕ್ತಿಯನ್ನ, ಬರೀ ಮಾತಲ್ಲ, ಕಾರ್ಯತಃ ಕಂಡು ಇಂತಹ ಪ್ರಧಾನಿ ದೊರೆತ ಭಾರತದ ಪ್ರಗತಿಯನ್ನು ನೋಡಲು ವಿಶ್ವವೇ ಕಾದಿದೆ ಎಂದೆನಿಸಿತು.

ನನ್ನ ಮತ್ತೊಬ್ಬ ಸ್ನೇಹಿತೆ ಅತಿ ಆನಂದದಿಂದ ತನ್ನ ಅನಿಸಿಕೆಯನ್ನು ಈ ರೀತಿ ವ್ಯಕ್ತ ಪಡಿಸುತ್ತಾಳೆ - ರೇಖಾ, ನಾವೆಲ್ಲಾ ಜುಮ್ಮಂತ ಸಭಾಂಗಣದಲ್ಲಿ ಕುಳಿತು ಭರ್ಜರಿ ಕಾರ್ಯಕ್ರಮವನ್ನು ವೀಕ್ಷಿಸುವುದರಲ್ಲಿ ಮಗ್ನರಾಗಿದ್ದಾಗ, ಹೊರಾಂಗಣವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿದ ಎಲ್ಲ ನಿಸ್ಪೃಹ ಸೇವಕರಿಗೂ ನನ್ನ ನಮನ. ಕಾರ್ಯಕ್ರಮ ಸಂಜೆ ಆರು ಘಂಟೆಗೆ ಪ್ರಾರಂಭವಾದದ್ದು.... ಆದರೆ ಮಧ್ಯಾಹ್ನ ಮೂರು ಘಂಟೆಗೆ ನಾನು ಒಳಗೆ ಬರುತ್ತಿದ್ದಂತೆಯೇ ಅಲ್ಲಲ್ಲಿ ಎಂಜಲು ತಟ್ಟೆ-ಲೋಟಗಳ ಕಂಡು ನಾನು, ಅಯ್ಯೋ ಸ್ವಚ್ಛತೆಯ ಆಂದೋಳನ ಎಬ್ಬಿಸಿರುವ ಒಬ್ಬ ಪ್ರಧಾನಿಗೆ ನಾವು ಈ ರೀತಿಯ ವಾತಾವರಣ ಕಲ್ಪಿಸಿದ್ದೇವೆಯೇ ... ಎಂದು ಯೋಚಿಸಿ ನಿರಾಶೆಗೊಂಡಿದ್ದೆ... ಆದರೆ ಕಾರ್ಯಕ್ರಮ ಮುಗಿಸಿ ಆಚೆ ಬಂದಾಗ ಎಲ್ಲ ಕಸ-ಕೊಳಕು ಮಾಯವಾಗಿ ಇದೇ ಹೊರಾಂಗಣ ಸ್ವಚ್ಛ ಮಾಡಲಾಗಿತ್ತು... ಶಭಾಶ್! ಅದ್ಭುತ ಸ್ವಯಂಸೇವೆ ಸಲ್ಲಿಸಿದ ಸರ್ವರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು

ಮುಂದಿನ ಪುಟ ನೋಡಿ ...

ಒಟ್ಟಿನಲ್ಲಿ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯ ಮೋಡಿಗೆ ಆಸ್ಟ್ರೇಲಿಯಾ ಭಾರತೀಯರು ಸ್ತಂಭೀಭೂತರಾದದ್ದಂತೂ ನಿಜ ...! ನವೆಂಬರ್ ೧೭ನೆ ತಾರೀಖು ಸಿಡ್ನಿ ಒಲಿಂಪಿಕ್ ಕ್ರೀಡಾಂಗಣ ದೆಹಲಿಯ ಸ್ವಾತಂತ್ರ್ಯ ದಿನಾಚರಣೆಯ ಹಬ್ಬದಷ್ಟು ಬಣ್ಣಗಳಿಂದ ತುಂಬಿದ್ದು ಸ್ಥಳೀಯ ಯುವ ಪ್ರತಿಭೆಗಳಿಗೆ ಒಂದು ಸುವರ್ಣಾವಕಾಶ ತಂದೊದಗಿಸಿತು. ಸಿಡ್ನಿ ಕನ್ನಡ ಸಮುದಾಯ ಹೆಮ್ಮೆ ಪಡಬೇಕಾದ ವಿಷಯವೇನೆಂದರೆ ಸ್ವಾಗತ ಗೀತೆಯಿಂದ ಅಂತ್ಯದ ರಾಷ್ಟ್ರಗೀತೆಯವರೆಗೆ ಕೊಟ್ಟ ಕೊಡುಗೆ! ಕುಮಾರಿ ಅಂಕಿತ ಆನಂದ ತನ್ನ ಕಂಚಿನ ಕಂಠದಲ್ಲಿ ಮೊದಲು ಶ್ಲೋಕ ನಂತರ ಆಸ್ಟ್ರೇಲಿಯಾ ರಾಷ್ಟ್ರಗೀತೆ ಯನ್ನು ಇಂಪಾಗಿ ಹಾಡಿ ರಂಜಿಸಿದಳು. ನಮ್ಮೆಲರ ನೆಚ್ಚಿನ ಕಲಾವಿದೆ ಪುಷ್ಪ ಜಗದೀಶ್ 'ವಂದೇ-ಮಾತರಂ' ಹಾಡಿ ಪ್ರೇಕ್ಷಕರನ್ನು ಮಂತ್ರ-ಮುಗ್ಧರನ್ನಾಗಿಸಿದರು. ಕುಮಾರಿ ಗಾರ್ಗಿ ಬೆಳ್ಳಾವೆ ಕಥಕ್ ನೃತ್ಯದ ಮೂಲಕ ಹದಿನಾರು ಸಾವಿರ ಭಾರತೀಯರ ಮುಂದೆ ತನ್ನ ಪ್ರತಿಭೆಯನ್ನು ಅದ್ಭುತವಾಗಿ ಪ್ರದರ್ಶಿಸಿದಳು.... ಮತ್ತೊಂದು ಸ್ವಾರಸ್ಯಕರ ಘಟನೆ ಘಟಿಸಿತು - ನಮ್ಮ ಸಮುದಾಯದ ಹಿರಿಯ ವ್ಯಂಗ್ಯ ಚಿತ್ರಕಾರರಾದ ಶ್ರೀ ರಮೇಶ್ ಆಳ್ವಂಕ್ಕರ್ ಶ್ರೀ ಮೋದಿಯವರನ್ನು ಭೇಟಿ ಮಾಡಿ ತಮ್ಮ ಕಲೆಯನ್ನು ವಯ್ಯಕ್ತಿಕವಾಗಿ ಪರಿಚಯಿಸುವ ಅವಕಾಶ ಪಡೆದುಕೊಂಡು ತಮ್ಮ ವರ್ಷಗಳ ಕಾಲದ ಕನಸನ್ನು ನನಸಾಗಿಸಿಕೊಂಡರು.

ಕರ್ನಾಟಕದ ಕ್ರಿಕೆಟ್ ಪಟು ಜವಗಲ್ ಶ್ರೀನಾಥ್ ಆಗಮಿಸಿದ್ದು ಸಿಡ್ನಿ ಕನ್ನಡಿಗರಿಗೆಲ್ಲ ಮಗದೊಂದು ಸಂತೋಷಕರ ವಿಷಯವಾಯಿತು ▪



ಸಂಸ್ಕೃತದಲ್ಲಿ ಸುಭಾಷಿತ ಎಂದರೆ ಒಳ್ಳೆಯ ಮಾತು ಎಂದು ಅರ್ಥ. ಸುಭಾಷಿತಗಳಲ್ಲಿ ಅನೇಕ ವಿಧ. ಸಮಾಜದಲ್ಲಿ ನಮ್ಮ ನಡವಳಿಕೆ ಹೇಗಿರಬೇಕು, ಯಾವುದನ್ನು ಮಾಡಿದರೆ ನಮಗೆ ಹಿತ, ಬುದ್ಧಿವಂತನ ಲಕ್ಷಣಗಳೇನು, ಮೂರ್ಖನ ಲಕ್ಷಣಗಳೇನು, ಮಹಾತ್ಮರ ಗುಣಗಳೆಂಥವು, ವಿದ್ಯೆಯ ಮಹಿಮೆ ಇತ್ಯಾದಿ ಹಲವಾರು ವಿಷಯಗಳನ್ನು ಮನದಟ್ಟುವಂತೆ ಸಂಕ್ಷಿಪ್ತವಾಗಿ ತಿಳಿಯ ಹೇಳುವುದು ಸುಭಾಷಿತಗಳ ವೈಶಿಷ್ಟ್ಯ. ಈಗ ಬಳಕೆಯಲ್ಲಿರುವ ಸುಭಾಷಿತಗಳ ಮೂಲಗಳು ಹಲವಾರು:

* ನಮ್ಮ ಪವಿತ್ರ ಗ್ರಂಥಗಳಾದ ರಾಮಾಯಣ ಮತ್ತು ಮಹಾಭಾರತ
* ನೀತಿಬೋಧಕ ಕಥಾಸಂಕಲನಗಳಾದ ಪಂಚತಂತ್ರ ಮತ್ತು ಹಿತೋಪದೇಶ
* ಗುಣಾಢ್ಯನ ಕಥಾಸರಿತ್ಸಾಗರ
* ಎಲ್ಲಕ್ಕಿಂತ ಹೆಚ್ಚಾಗಿ ಭರ್ತೃಹರಿಯ ನೀತಿಶತಕ ಮತ್ತು ಚಾಣಕ್ಯನ ನೀತಿ.

ಆದರೆ ಮೇಲಿನ ಯಾವ ಮೂಲಕ್ಕೂ ಸೇರದ ಅಥವಾ ಮೂಲ ಯಾವುದೆಂದೇ ತಿಳಿಯದ ಸುಭಾಷಿತಗಳೂ ಬೇಕಾದಷ್ಟಿವೆ. ಸಾಧಾರಣವಾಗಿ ಸುಭಾಷಿತಗಳು ಎರಡೇ ಸಾಲಿನ ಶ್ಲೋಕಗಳು ಮತ್ತು ಇವುಗಳ ಭಾಷೆ ತುಂಬ ಸರಳ; ಆದಕಾರಣ ಇವನ್ನು ನೆನಪಿನಲ್ಲಿಡುವುದು ಕಷ್ಟವಿಲ್ಲ. ಆದ್ದರಿಂದಲೇ ಇವುಗಳು ನೂರಾರು, ಏಕೆ ಸಾವಿರಾರು ವರ್ಷಗಳಷ್ಟು ಹಳೆಯವಾದರೂ, ಭಾರತದ ಆದ್ಯಂತ ಅನೇಕ ಜನ ಇವುಗಳಲ್ಲಿ ಕೆಲವನ್ನಾದರೂ ಉದ್ಧರಿಸಬಲ್ಲರು. ಉದಾಹರಣೆಗೆ 'ವಸುಧೈವ ಕುಟುಂಬಕಂ' ಎಂಬ ಎಲ್ಲರಿಗೂ ಪರಿಚಿತವಾಗಿರುವ ಪದಗುಚ್ಛ ಈ ಕೆಳಗಿನ ಸುಭಾಷಿತದಲ್ಲಿದೆ:

ಅಯಂ ನಿಜಃ ಪರೋವೇತಿ ಗಣನಾ ಲಘು ಚೇತಸಾಂ |
ಉದಾರಚರಿತಾನಾಂ ತು ವಸುಧೈವ ಕುಟುಂಬಕಂ ||

'ಇವನು ನಮ್ಮವ, ಇವನು ಪರಕೀಯ' ಈ ರೀತಿ ನೆನಸುವುದು ಕೀಳುಬುದ್ಧಿಯವರ ಲಕ್ಷಣ. ಔದಾರ್ಯದ ಸ್ವಭಾವದವರಿಗಾದರೋ ಈ ಸಮಸ್ತ ಪ್ರಪಂಚವೇ ಒಂದು ಕುಟುಂಬದಂತೆ. ಎಂದರೆ ಸ್ವಭಾವತಃ ಧಾರಾಳ ಮನಸ್ಸಿನವರಿಗೆ ಯಾವ ಬಗೆಯ ಪೂರ್ವದ್ವೇಷವೂ (prejudice) ಇರುವುದಿಲ್ಲ. ಮಾತನಾಡಿದರೆ ಎಂತಹ ಮಾತನ್ನಾಡಬೇಕು ಎಂಬುದನ್ನು ಈ ಸುಭಾಷಿತ ತಿಳಿಸುತ್ತದೆ:

ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಯಾತ್ ಸತ್ಯಮಪ್ರಿಯಂ |
ನಾಸತ್ಯಂ ಚ ಪ್ರಿಯಂ ಬ್ರೂಯಾತ್ ಏಷ ಧರ್ಮಃ ಸನಾತನಃ ||

ಸತ್ಯವನ್ನು ನುಡಿಯಬೇಕು, ಕೇಳುವವರಿಗೆ ಇಷ್ಟವಾದದ್ದನ್ನು ನುಡಿಯಬೇಕು. ಅಪ್ರಿಯವಾದ ಸತ್ಯವನ್ನು ನುಡಿಯಕೂಡದು. ಕೇಳುವವರಿಗೆ ಅದು ಇಷ್ಟವಾಗಬಹುದಾದರೂ ಅಸತ್ಯವನ್ನು ನುಡಿಯಬಾರದು - ಇದೇ ಸನಾತನ ಧರ್ಮ. ಈ ಶ್ಲೋಕದಲ್ಲಿನ 'ನ ಬ್ರೂಯಾತ್ ಸತ್ಯಮಪ್ರಿಯಂ' ಎಂಬ ಹಿನ್ನೆಲೆಯಲ್ಲಿ ವಾಲ್ಮೀಕಿ ರಾಮಯಣದ ಒಂದು ಸಂದರ್ಭ ನೆನಪಿಗೆ ಬರುತ್ತದೆ. ಸೀತೆಯನ್ನು ಅಪಹರಣ ಮಾಡಲು ತನಗೆ ಸಹಾಯ ಮಾಡಬೇಕೆಂದು, ರಾವಣನು ಮಾರೀಚನನ್ನು ಕೇಳಿಕೊಳ್ಳುತ್ತಾನೆ. ಮಾರೀಚನು ಹಾಗೆ ಮಾಡುವುದು ತಪ್ಪೆಂದೂ, ಸೀತಾಪಹರಣದಿಂದ ರಾವಾಣನಿಗೆ ಯಾವ ಶ್ರೇಯಸ್ಸೂ ಉಂಟಾಗಲಾರದೆಂದೂ ವಿಧವಿಧವಾಗಿ ಬೋಧಿಸುತ್ತಾನೆ. ಆದರೆ ರಾವಣನು ಮಾರೀಚನ ಯಾವ ಮಾತಿಗೂ ಕಿವಿಗೊಡುವುದಿಲ್ಲ. ಆಗ ಮಾರೀಚನು ಹೀಗೆ ಹೇಳುತ್ತಾನೆ:

ಸುಲಭಾಃ ಪುರುಷಾಃ ರಾಜನ್ ಸತತಂ ಪ್ರಿಯವಾದಿನಃ |
ಅಪ್ರಿಯಸ್ಯ ಚ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ||

ಮಹಾರಾಜ! ಯಾವಾಗಲೂ ಪ್ರಭುವಿಗೆ ಪ್ರಿಯವಾದುದನ್ನೇ ಮಾತನಾಡುವವರು ಬೇಕಾದಷ್ಟು ಮಂದಿ. ಆದರೆ ಕೇಳುವುದಕ್ಕೆ ಇಷ್ಟವಾಗದೆ ಇರಬಹುದಾದರೂ, ಹಿತವಾದ, ನಮಗೆ ಶ್ರೇಯಸ್ಕರವಾದ ಮಾತನ್ನು ಆಡುವವರೂ ಅಪರೂಪ, ಕೇಳುವವರೂ ಅಪರೂಪ. ಸುಭಾಷಿತಗಳಲ್ಲಿ ಬುದ್ಧಿ ಮಾತುಗಳನ್ನು ಮಾತ್ರವಲ್ಲ, ಅನೇಕ ವೇಳೆ ಇವುಗಳಲ್ಲಿ ಹಾಸ್ಯವನ್ನೂ, ವಿಡಂಬನೆಯನ್ನೂ, ಪದ ಚಮತ್ಕಾರಗಳನ್ನೂ ಕಾಣಬಹುದು.

ಮುಂದಿನ ಪುಟ ನೋಡಿ ...

ಈ ಕೆಳಗಿನ ಸುಭಾಷಿತಗಳಲ್ಲಿರುವ ಹಾಸ್ಯಪ್ರಜ್ಞೆಯನ್ನು ನೋಡಿರಿ (ಇವುಗಳ ಅಭಿಪ್ರಾಯಗಳನ್ನು ನೀವು ಒಪ್ಪಬೇಕೆಂಬ ಬಲಾತ್ಕಾರವೇನೂ ಇಲ್ಲ!)

ಕನ್ಯಾ ವರಯತೇ ರೂಪಂ ಮಾತಾ ವಿತ್ತಂ ಪಿತಾ ಶ್ರುತಮ್ |
ಬಾಂಧವಾಃ ಕುಲಮಿಚ್ಛಂತಿ ಮೃಷ್ಟಾನ್ನಂ ಇತರೇ ಜನಾಃ ||

ಮದುವೆ ಎಂದರೆ, ಕನ್ಯೆಯು ತನ್ನ ವರನು ರೂಪವಂತನಾಗಿರಬೇಕೆಂದು ಇಚ್ಛಿಸುತ್ತಾಳೆ; ತಾಯಿಯು ಐಶ್ವರ್ಯವನ್ನು ಬಯಸುತ್ತಾಳೆ; ತಂದೆಯು ವರನು ಎಷ್ಟು ತಿಳಿದವನು ಎಂಬುದನ್ನು ಗಮನಿಸುತ್ತಾನೆ; ಬಂಧುಗಳು ವರನ ಕುಲ ಎಂತಹುದು ಎಂದು ನೋಡುತ್ತಾರೆ; ಇತರ ಜನರಿಗಾದರೋ ಒಳ್ಳೆಯ ಊಟ ಸಿಕ್ಕಿದರೆ ಸಾಕು.

ಮದುವೆಯಾದ ಹೊಸದರಲ್ಲಿ ಅಳಿಯನಿಗೆ ಅತ್ತೆ ಮಾವಂದಿರಿಂದ ದೊರಕುವ ಉಪಚಾರಕ್ಕೂ, ಆದರಾತಿಥ್ಯಗಳಿಗೂ ಮಿತಿಯಿಲ್ಲ - ಎಂದರೆ ಹೊಸ ಅಳಿಯನಿಗೆ ಮಾವನ ಮನೆ ಒಂದು ಸ್ವರ್ಗದಂತೆಯೇ ತೋರುತ್ತದೆ. ಹರಿ ಹರಾದಿಗಳಿಗೂ ಈ ರೀತಿ ಅನಿಸಿರಬಹುದೇನೋ?

ಅಸಾರೇ ಖಲು ಸಂಸಾರೇ ಸಾರಂ ಶ್ವಶುರಮಂದಿರಮ್ |
ಹರೋ ಹಿಮಾಲಯೇ ಶೇತೇ ವಿಷ್ಣುಃ ಶೇತೇ ಮಹೋದಧೌ ||

ಈ ಶುಷ್ಕವಾದ ಜಗತ್ತಿನಲ್ಲಿ, ಸಾರಭರಿತವಾವುದೆಂದರೆ ಅದು ಮಾವನ ಮನೆಯೇ. ಆದ್ದರಿಂದಲೇ ಶಿವನು ಹಿಮಾಲಯದಲ್ಲಿ ನೆಲಸಿದ್ದಾನೆ (ಪಾರ್ವತಿಯು ಹಿಮವಂತನ ಮಗಳು); ವಿಷ್ಣುವು ಕ್ಷೀರಸಾಗರದಲ್ಲಿ ಪವಡಿಸಿದ್ದಾನೆ (ಲಕ್ಷ್ಮಿಯು ಸಮುದ್ರರಾಜನ ಪುತ್ರಿ). ಆದರೆ ನಮ್ಮ ನಿಮ್ಮಂಥವರು ಶಾಶ್ವತವಾಗಿ ಮಾವನ ಮನೆಯಲ್ಲಿ ಬೇರೂರಲು ಸಾಧ್ಯವಿಲ್ಲ. ಕೆಲವು ದಿನಗಳಾದ ಮೇಲೆ ಅತ್ತೆ ಮಾವಂದಿರು 'ಈ ಶನಿ ಎಲ್ಲಿಂದ ಬಂದು ವಕ್ಕರಿಸಿದನಪ್ಪಾ? ಯಾವಾಗ ಹೆಂಡತಿಯನ್ನು ಕರೆದುಕೊಂಡು ತನ್ನ ಮನೆಗೆ ಹೋದಾನು?' ಎಂದು ಪಿಸುಗುಟ್ಟಲು ಶುರುಮಾಡುತ್ತಾರೆ. ಮೊದಲು ವರನಾಗಿದ್ದವನು ಈಗ ಅನಿಷ್ಟ ಗ್ರಹವಾಗುತ್ತಾನೆ!

ಸದಾ ವಕ್ರಃ ಸದಾ ಕ್ರೂರಃ ಸದಾ ಪೂಜಾಮಪೇಕ್ಷತೇ |
ಕನ್ಯಾರಾಶಿಸ್ಥಿತೋ ನಿತ್ಯಂ ಜಾಮಾತಾ ದಶಮಗ್ರಹಃ ||

ಇವನ ಬುದ್ಧಿಯು ಯಾವಾಗಲೂ ಕೊಂಕು; ಇವನಿಗೆ ಬೇರೆಯವರ ಸುಖ ದುಃಖಗಳ ಪರಿವೆಯಿಲ್ಲ; ಇವನಿಗೆ ಸದಾಕಾಲವೂ ಉಪಚಾರ ಮಾಡುತ್ತಿರಬೇಕು. ಬೇರೆಯ ನವಗ್ರಹಗಳಾದರೋ ರಾಶಿಯಿಂದ ರಾಶಿಗೆ ಚಲಿಸುತ್ತಿರುತ್ತವೆ. ಈ ಅಳಿಯನೆಂಬ ಹತ್ತನೆಯ ಗ್ರಹವು ಶಾಶ್ವತವಾಗಿ ಕನ್ಯಾರಾಶಿ (ಮಾವನ ಮನೆ) ಯಲ್ಲೇ ನೆಲಸಿಬಿಟ್ಟಿದ್ದಾನೆ! ಆದರೆ ಹರಿಹರಬ್ರಹ್ಮಾದಿಗಳು ತಮ್ಮ ನೆಲೆಗಳನ್ನು ಆಯ್ಕೆ ಮಾಡಿರುವುದಕ್ಕೆ ಬೇರೆಯ ಕಾರಣವೇ ಇರಬಹುದೆಂದು ಮತ್ತೊಬ್ಬ ಸುಭಾಷಿತಕಾರನು ಸೂಚಿಸುತ್ತಾನೆ:

ಕಮಲೇ ಬ್ರಹ್ಮಾ ಶೇತೇ ಹರಃ ಶೇತೇ ಹಿಮಾಲಯೇ |
ಕ್ಷೀರಾಬ್ಧೌ ಹರಿಃ ಶೇತೇ ಮನ್ಯೇ ಮತ್ಕುಣಶಂಕಯಾ ||

ಬ್ರಹ್ಮನು ಕಮಲದಲ್ಲಿ ನೆಲಸಿದ್ದಾನೆ; ಶಂಕರನು ಮಲಗುವುದು ಹಿಮಲಯದಲ್ಲಿ; ನಾರಾಯಣನಾದರೋ ಕ್ಷೀರಾಬ್ಧಿಶಯನ. ಇದೆಲ್ಲಕ್ಕೂ ಕಾರಣ ಒಂದೇ. ಇವರೆಲ್ಲರಿಗೂ ರಾತ್ರಿಯ ತಿಗಣೆಗಳ ಭಯ! ದೇವಾಧಿದೇವರೂ ಸುಭಾಷಿತಕಾರರ ಹಾಸ್ಯಕ್ಕೆ ಗುರಿಯಾಗಬಲ್ಲರು ಎಂದ ಮೇಲೆ ಸಮಾಜದಲ್ಲಿ ಗೌರವಾನ್ವಿತ ಜನರೂ ಇವರ ಕುಹಕ ನೋಟದಿಂದ ತಪ್ಪಿಸಿಕೊಳ್ಳಲಾರರು:

ವೈದ್ಯರಾಜ ನಮಸ್ತುಭ್ಯಂ ಯಮರಾಜ ಸಹೋದರ |
ಯಮಸ್ತು ಹರತಿ ಪ್ರಾಣಾನ್ ವೈದ್ಯಃ ಪ್ರಾಣಾನ್ ಧನಾನಿ ಚ ||

ವೈದ್ಯರಾಜ ನಿನಗೆ ನಮಸ್ಕಾರ; ನೀನು ಯಮರಾಜನ ಅಣ್ಣನೇ ಸರಿ. ಯಮನಾದರೋ ಪ್ರಾಣಗಳನ್ನು ಮಾತ್ರ ಅಪಹರಿಸುತ್ತಾನೆ. ನೀನು ಪ್ರಾಣವನ್ನೂ ತೆಗೆಯುವೆ, ಹಣವನ್ನೂ ಕಸಿಯುವೆ. ಈ ಮೇಲೆ ಪ್ರಸ್ತುತ ಮಾಡಿರುವುದು ಸುಭಾಷಿತಗಳ ಸ್ಥೂಲ ಪರಿಚಯ ಮಾತ್ರ. ಈಗ ಲಭ್ಯವಿರುವ ಸುಭಾಷಿತಗಳ ಸಂಖ್ಯೆ ನೂರಾರು. ಇವುಗಳಲ್ಲಿ ದಿನಕ್ಕೆ ಒಂದಾದರೂ ಸುಭಾಷಿತವನ್ನು ಓದಿ ಅರ್ಥಮಾಡಿಕೊಂಡರೆ ಆ ಸಮಯ ವ್ಯರ್ಥವಲ್ಲ, ಮನರಂಜನೆಯೂ ಆದೀತು. ▪

ವಿಚಾರ ವಿಹಾರ

ಮಾಲು, ಅಡಿಲೈಡ್

ನಾವು ಮನುಷ್ಯರು. ನಮಗೆ ಒಂದು ಧರ್ಮವಿದೆ.

ನಾಸ್ತಿಕವಾದಿಗಳಾದ ಶ್ರೀ ಜಿದ್ದು ಕೃಷ್ಣಮೂರ್ತಿಯಂಥವರಿಗೂ ಒಂದು ಧರ್ಮವಿತ್ತು. ಅದು ಮನುಷ್ಯ ಧರ್ಮವೂ ಆಗಿರಬಹುದು. ನಾವು ಮನುಕುಲದವರು. ಮನುವಿನ ಕಾಲ ಮನ್ವಂತರ. ಹದಿನಾಲ್ಕು ಮನುಗಳಿದ್ದರು. ಅವರಲ್ಲಿ ಒಬ್ಬ ವೈವಸ್ವತ ಮನು, ನಾವು ವೈವಸ್ವತ ಮನು ಸಂವತ್ಸರದಲ್ಲಿ ಇದ್ದೇವೆ. ಒಂದು ಮನ್ವಂತರದಲ್ಲಿ 852,000 ದೇವತಾ ವರ್ಷಗಳು, ಅಥವಾ 306,720,0000 ಮನುಷ್ಯ ವರ್ಷಗಳು ಇವೆ. ನಾವಿರುವ ವರ್ತಮಾನಕಾಲದಲ್ಲಿ ನಡೆಯುತ್ತಿರುವುದು ವೈವಸ್ವತ ಮನ್ವಂತರ. ಸಮಾಜದಲ್ಲಿ ಮನುಷ್ಯ ಹೇಗೆ ನೈತಿಕವಾಗಿ ಬದುಕು ನಡೆಸಬೇಕೆಂಬ ನಿಯಮಗಳು ಮತ್ತು ಕಟ್ಟುಬಂಧಗಳೇ ಮನುಸ್ಮೃತಿ, ಮನುವಿನಿಂದ ರಚಿತವಾದದ್ದು.

ಹಲವಾರು ಮನುಸ್ಮೃತಿಯ ಕಟ್ಟುಬಂಧಗಳು ಈಗಾಗಲೇ ನಮ್ಮ ಜೀವನದಲ್ಲಿ ಬೆರೆತು ಹೋಗಿವೆ. ಮನುವಿನ ಕೆಲವು 'ಸ್ಮೃತಿಗಳು' ಪುರುಷ ಪ್ರಧಾನವಾಗಿವೆ ಮತ್ತು ಹೆಣ್ಣುಗಳಿಗೆ ಸಮಾಜದಲ್ಲಿ ಪುರುಷನಷ್ಟೇ ಆದ್ಯತೆ ಮನು ಕೊಟ್ಟಿಲ್ಲವೆಂಬ ಆಪಾದನೆಗೆ ಅವನ ಮನುಸ್ಮೃತಿ ಚರ್ಚೆಗೆ ಒಳಪಟ್ಟಿದೆ.

ಮನುಸ್ಮೃತಿಯ 'ನ ಸ್ತ್ರೀ ಸ್ವಾತಂತ್ರಂ ಅರ್ಹತಿ' ಶ್ಲೋಕದ ಪೂರ್ವ ಸಾಲುಗಳನ್ನು ಅರ್ಥಮಾಡಿಕೊಳ್ಳದೆ ಅವನ ಈ ಸಾಲುಗಳನ್ನು ಮಾತ್ರ ಬಳಸಿ ಈಗಲೂ ಆ ಋಷಿ ಮನುವಿಗೆ ಅನ್ಯಾಯ ಮಾಡುತ್ತಿರುವುದು ಸಮಂಜಸವೆನಿಸದು. ಆ ಸಾಲನ್ನೂಳಗೊಂಡ ಪೂರ್ಣ ಶ್ಲೋಕ ಇಲ್ಲಿದೆ:

"ಪಿತಃ ರಕ್ಷಂತಿ ಕೌಮಾರೆ
ಪತಿ ರಕ್ಷತಿ ಯವ್ವನೆ
ಪುತ್ರೋ ರಕ್ಷಂತಿ ವರ್ದಕ್ಯೇ
ನ ಸ್ತ್ರೀ ಸ್ವಾತಂತ್ರಂ ಅರ್ಹತಿ"

ಇದರ ಅರ್ಥ?

ಹೆಣ್ಣು ಕೌಮಾರ್ಯ ಸ್ಥಿತಿಯಲ್ಲಿರುವಾಗ ತಂದೆಯಾದವನು ರಕ್ಷಿಸಬೇಕು
ಯವ್ವನ ಕಾಲದಲ್ಲಿ ಅವಳನ್ನು ಹೊಂದಿದ ಪತಿಯಾದವನು ರಕ್ಷಿಸಬೇಕು
ತಾಯಿಯಾದ ಆದ ಅವಳನ್ನು ವೃಧ್ಯಾಪ್ಯದಲ್ಲಿ ಮಕ್ಕಳು ರಕ್ಷಿಸಬೇಕು
ಹೆಣ್ಣನ್ನು ಒಬ್ಬಂಟಿಯಾಗಿ ಸಮಾಜದಲ್ಲಿ ಬಿಡಬಾರದು
ಆದ್ದರಿಂದ ಹೆಣ್ಣು ಸ್ವಾಂತಂತ್ರ್ಯವನ್ನು ಹೊಂದಿರಬಾರದು.

ಹೆಣ್ಣಿನ ಸರಿಸಮಾನತೆಗೆ ಪ್ರಪಂಚದ ಮೂಲೆ ಮೂಲೆಯಲ್ಲೂ ಚರ್ಚೆಗಳು ಮತ್ತು ಹೋರಾಟ ನಡೆಯುತ್ತಿದ್ದರೂ ಕೂಡ 'ಲೇಡೀಸ್ ಫಸ್ಟ್' ಎನ್ನುವ ಪುರುಷರ ಸೌಜನ್ಯತೆಯು ಮೆರೆಯುತ್ತಲೇ ಇದೆ.

ಶ್ರೀ ಮಾಸ್ಟರ್ ಹಿರಣ್ಣಯ್ಯ ನವರು ಒಂದು ಭಾಷಣದಲ್ಲಿ ಅವರ ಪತ್ನಿಯನ್ನು ತಮ್ಮ 'ತಾಯಿ' ಎಂದು ಕೊಂಡಾಡಿದರು. ಹೌದು, ಹೆಣ್ಣಿಗೆ ಅದು ಕೂಡ ಒಂದು ಮುಖ್ಯವಾದ ಒಂದು ಗುಣ. ಆ ಗುಣವೇ 'ಕರುಣೇಷು ಮಾತಾ'.

'ಭಾರ್ಯಾಚ ಪರಮ ಸಖ' ಹೆಂಡತಿ ಪರಮ ಸ್ನೇಹಿತೆಯೂ ಹೌದು.

'ಸ ಭಾರ್ಯ ಯಾ ಗೃಹೇ ದಕ್ಷಾ'. ಇದರ ಅರ್ಥ?

ಯಾವ ಹೆಣ್ಣು ಗೃಹದಲ್ಲಿ ದಕ್ಷ್ಯಳೋ ಅವಳೇ ಹೆಂಡತಿ' ಇದು ವ್ಯಾಸ ವಚನ. ಶ್ರೀ ಜಿ.ಪಿ.ರಾಜರತ್ನಂ ರವರು ತಮ್ಮ ಗೃಹಕಾರ್ಯದಲ್ಲಿ ದಕ್ಷ್ಯಳಾದ ಪತ್ನಿಯನ್ನು ಈ ರೀತಿ ನೆನಪಿಸಿಕೊಂಡಿದ್ದರು.

ಒಂದಂತೂ ಸ್ಪಷ್ಟ:

'ಯತ್ರ ಪೂಜ್ಯಸ್ತು ನಾರ್ಯಾಹ, ರಮ್ಯತೆ ತತ್ರ ದೇವತಾಹ'
ಯಾವ ಸಮಾಜದಲ್ಲಿ ಹೆಣ್ಣು ಗೌರವಿಸಲ್ಪಡುತ್ತಾಳೋ
ಅಲ್ಲಿ ದೇವತೆಗಳು ಸುಪ್ರೀತರಾಗುತ್ತಾರೆ.
ಇದು ಮನುವಿನ ಮನುಸ್ಮೃತಿಯ ರತ್ನ.

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಭಿಕ್ಷುಕೋಪಾಖ್ಯಾನವು

ಸಾ ಮಿಲ್ ನಲ್ಲಿ ಬೃಹತ್ ಗರಗಸ ಮರ ಕೊಯ್ಯುವ ಸದ್ದು ಕೇಳಿದ್ದೀರಲ್ಲಾ, ಅದಕ್ಕಿಂತಲೂ ಹತ್ತು ಪಟ್ಟು ಘೋರ ನಮ್ಮ ಮನೆಯ ಮುಂದೆ ಬಂದು 'ಅಮ್ಮಾ... ತಾಯೀ...' ಎಂದು ಅರಚುವ ಭಿಕ್ಷುಕನ ದನಿ. In fact, ಆ ಗರಗಸದ ಸದ್ದು ಇವನ ಗಂಟಲಿನಿಂದ ಹೊರಡುವ ಸದ್ದಿಗೆ ಹೋಲಿಸಿದರೆ ಸುಬ್ಬಲಕ್ಷ್ಮಿಯ ಸಂಗೀತ!

ಅಂದೂ ಬಂದ. ಆದರೆ 'ಅಮ್ಮಾ ತಾಯೀ' ಬದಲಿಗೆ 'ಯಜಮಾನ್ರೇ...' ಎಂದರಚಿದ. ನಮ್ಮ ಮನೆಯ ಯಜಮಾನ್ರು ನನ್ನವಳೇ ಆದ್ದರಿಂದ 'ನೋಡೇ.....' ಎಂದರಚಿ ಟಿವಿಯತ್ತ ತಿರುಗಿ ಕುಳಿತೆ.

'ಆ ಸ್ಟುಪಿಡ್ ಫೆಲೋ ನೀವೇ ಯಜಮಾನಾಂತ ತಿಳ್ಕೊಂಡಿದಾನೆ. ನೀವೇ ಬೇಕಂತೆ'

ಧ್ವನಿಸುನಾಮಿ ಎಸೆದು ಸಾಗಿದಳು ನನ್ನ ಮನೆದೊಣ್ಣೆ...ಅಲ್ಲ, ಕ್ಷಮಿಸಿ... ನನ್ನ ಮನದನ್ನೆ.

ನಾನು ವೇದಿಕೆಯೇರಿದಾಗ ಪಾದರಸ, ಕಛೇರಿಯಲ್ಲಿ ಆಮೆ, ಮನೆಯಲ್ಲಿ ಕುಂಭಕರ್ಣನ ಕೊನೆಯ ತುಂಡು. ಬಿದ್ದಲ್ಲಿಂದ ಎದ್ದು ಹೊರಬಾಗಿಲಿಗೆ ಬರಬೇಕಾದರೆ ಮಂತ್ರಿ ಸರ್ಕಾರಿ ಕ್ವಾರ್ಟರ್ಸ್ ಖಾಲಿ ಮಾಡಿ ಹೊರಡಲೇಬೇಕಾದಾಗ ಆಗುವಷ್ಟು ಸಂಕಟ ಪಡುವವನು. ನಾನು ಬಾಗಿಲಿಗೆ ಹೋಗದಿದ್ದರೆ ಅವನೇ ಕಾದು, ಕಾದು, ಸುಸ್ತಾಗಿ, ಹೋಗಿಯಾನೆಂದು ಆಶಿಸುತ್ತಾ ಹಾಗೆಯೇ ದಿವಾನ್ ನ ಲೋಡಿಗೆ ಆತುಕೊಂಡೆ.

'ಯಜಮಾನ್ರೇ.....' ಮೊಳಗಿದ ಸೀಳುದನಿ ರಾವಣ, ಮಾರೀಚ, ಬಕಾಸುರ, ಜರಾಸಂಧ, ಭಸ್ಮಾಸುರ, ಹಿಡಿಂಬಾಸುರರ ದನಿಗಳನ್ನು ಒಟ್ಟುಗೂಡಿಸಿ ಹತ್ತರಷ್ಟು amplify ಮಾಡಲಾದ ದನಿಯಷ್ಟು ಘಟ್ಟಿಯಾಗಿತ್ತು. ಬೆಂಗಳೂರಿನ ನೈಸ್ ರೋಡಿನಲ್ಲಿನ ಎಲ್ಲಾ ಲಾರಿಗಳೂ ಒಟ್ಟಿಗೇ ಹಾರನ್ ಮಾಡಿದರೆ ಬರುವಂತಹ ಕರ್ಕಶತೆಯ ನೂರು ಪಟ್ಟು ಕರ್ಕಶತೆ ತುಂಬಿತ್ತು. ಬೆಚ್ಚಿ, ಬೆದರಿ, ಬೆಂಡಾಗಿ, ಮತ್ತೆ ಸ್ಟ್ರೈಟ್ ಆಗಿ, ಹೊರಗೆ ಬಂದೆ.

'ಏನ್ಬೇಕೋ ಅಮ್ಮಾವ್ರನ್ನ ಕೇಳಿ ಪಡೆಯೋದಲ್ವೇನಪ್ಪಾ...'

'ನೀನೇ ಬೇಕು ಸಾರ್'

'ಯಾಕೆ?'

'ನೀನು ಸಾಯ್ತೀಯಂತೆ?'

'ಎಲ್ಲರೂ ಒಂದಲ್ಲ ಒಂದು ದಿನ ಸಾಯೋವ್ರೇ ಅಲ್ಲವೇನಯ್ಯ' ಕಿರಿಕಿರಿಯನ್ನು ಹತ್ತಿಕ್ಕಿ ಹೇಳಿದೆ.

'ಆ ಸಾಯೋದಲ್ಲ ಸಾರ್, ಬರೆದು ಸಾಯೋದು. ಸಾಯ್ತೀ.... ರೈಟ್ರು'

ಎದೆಯಲ್ಲಿ ನವಿಲು ಕುಣಿದಾಡಿತು. ಗಗನದಲ್ಲಿ ಮಿಂಚು ಕಂಡಂತಾಯಿತು. ನಾನು... ಸೀನು ಉರುಫ್ ಸೀನಪ್ಪ ಉರುಫ್ ಶ್ರೀನಿವಾಸನ್... ಸಾಹಿತಿ ಎಂಬುದು ಮನೆಮನೆಗೂ ತಿಳಿದಿಲ್ಲದಿದ್ದರೂ ಮನೆಮನೆಗೂ ತಿರುಗುವ ಭಿಕ್ಷುಕನಿಗಾದರೂ ತಿಳಿಯಿತಲ್ಲ! ಇನ್ನು ಕೆಲವೇ ದಿನ! ಈ ಭಿಕ್ಷುಕನಿಂದ ಮತ್ತೊಬ್ಬ ಭಿಕ್ಷುಕನಿಗೆ, ಅವನಿಂದ ಭಿಕ್ಷುಕರ ಸಂಘದ ಕಾರ್ಯದರ್ಶಿಗೆ, ಅವನಿಂದ ನಗರಪಾಲಿಕೆಗೆ, ಅಲ್ಲಿಂದ ಮೇಯರ್ಗೆ, ಮೇಯರಿಂದ ಮಂತ್ರಿಗೆ, ಮಂತ್ರಿಯಿಂದ ಮುಖ್ಯಮಂತ್ರಿಗೆ ನಾನು ಸಾಹಿತಿ ಎಂಬ ಸುದ್ದಿ ತಲುಪಿ, ಮುಂದಿನ ರಾಜ್ಯೋತ್ಸವದಲ್ಲಿ ಮನೆಗೆ ಕನ್ನಡದ ರಥ ಕಳುಹಿಸಿ ರಾಜ್ಯೋತ್ಸವ ಪ್ರಶಸ್ತಿ ನೀಡಿ.....

'ಯಜಮಾನ್ರೇ....' ಹತ್ತು ಲಾರಿ ಹಾರನ್ ಗಳ ಕರ್ಕಶ ಧ್ವನಿಗೆ ನನ್ನ ಕನಸು ಹಾರಿತ್ತು.

"ಏನಯ್ಯ?'

'ನೀನು ನಮ್ಮ ರಾಜ್ಯೋಶವ ಫಂಕ್ಷನ್ ಗೆ ಅಧ್ಯಕ್ಷ ಆಗಬೇಕು ಸಾರ್'

'ನೀನು ಅನ್ನಬಾರದು ಕಣಯ್ಯ, ನೀವು ಅನ್ನು'

'ಸರಿ. ನೀವು ಬಾ ಸಾರ್'

ಖನ್ನಡದ ಪುತ್ರನೇ ಸೈ! ಇವನ ಕನ್ನಡ ಸರಿಪಡಿಸುವುದೂ ಒಂದೇ, ಸಾರ್ವಜನಿಕ ಟಿವಿಯ ನಿರೂಪಕಿಯ ಕನ್ನಡ ಸರಿಪಡಿಸುವುದೂ ಒಂದೇ ಎಂದುಕೊಳ್ಳುತ್ತಾ, 'ಯಾವ ಫಂಕ್ಷನ್? ಯಾರು ಮಾಡುತ್ತಾರೆ?' ಎಂದೆ.

'ನಮ್ಮದೇ. ಭಿಕ್ಷುಕರ ಸಂಘ. ನಾನೇ ಪೆಸಿಡೆಂಟು ಸಾರ್'

ನನಗೋ ಉಭಯಸಂಕಟ! ಅಧ್ಯಕ್ಷಸ್ಥಾನವನ್ನು ಬಿಟ್ಟುಕೊಡಲು ಖಂಡಿತ ಮನಸ್ಸಿಲ್ಲ. ಆದರೆ ಭಿಕ್ಷುಕರ ಸಂಘದ ಫಂಕ್ಷನ್ನಿಗೆ? ನನ್ನ ಮಾವನಿಗೆ ತಿಳಿದರೆ... ವಾಟ್ ಎಬೌಟ್ ಮೈ ಪ್ರೆಸ್ಟೀಜ್?

ಅಳೆದೂ ಸುರಿದೂ ಕಡೆಗೆ 'ಇಲ್ಲ ಕಣಯ್ಯ. ಆಗಲ್ಲ' ಎಂದೆ.
'ಒಪ್ಕೋ ಸಾರ್, ಇಲ್ದೇ ಇದ್ರೆ ನಮ್ಮ ಗುಂಪೇ ಬರತ್ತೆ. ನಮ್ಮ ಗುಂಪಲ್ಲಿ ತುಂಬಾ ಸಾಫ್ಟಾಗಿ ಕೂಗೋವ್ನು ನಾನೇ ಸಾರ್'
ಕಣ್ಮುಂದೆ ರಸ್ತೆಭರ್ತಿ ಭಿಕ್ಷುಕರು ತುಂಬಿನಿಂತು ಅಣುಬಾಂಬ್ ಸ್ಫೋಟದ ಸಮಯದಲ್ಲಿ ಆಗುವಷ್ಟರ ಮಟ್ಟದ ಸದ್ದು ಮಾಡುತ್ತಾ 'ಬಾ ಸಾರ್' ಎಂದು ಕೂಗುವ ದೃಶ್ಯ ಮೂಡಿಬಂತು. ಆ ಸದ್ದಿನಿಂದ ಹೊರಡುವ ಕಂಪನಗಳಿಂದ ಮನೆಗಳ ಗಾಜುಗಳು ಒಡೆದಾವು, ಗೋಡೆಗಳು ಬಿರುಕು ಬಿಟ್ಟಾವು.... ಮುಖ್ಯವಾಗಿ ಟಿವಿ ಸ್ಕ್ರೀನ್ ಚಪ್ಪಾಚೂರಾದೀತು ಎಂದು ಭಯವಾಯಿತು. ಕೂಡಲೆ ಅಧ್ಯಕ್ಷನಾಗಲು ಒಪ್ಪಿದೆ.

ಹೇಳಿದ ದಿನ, ಹೇಳಿದ ಸಮಯಕ್ಕೆ ಸರಿಯಾಗಿ, ರಸ್ತೆಯಗಲದ ಕಾರು ಮನೆಯ ಮುಂದೆ ನಿಂತಿತು. ಕಾರ್ ಡ್ರೈವ್ ಮಾಡುತ್ತಿದ್ದವನು ನಮ್ಮ ಮನೆಯ ಭಿಕ್ಷುಕನೇ!
''ಏನಯ್ಯಾ, ನಿನಗೆ ಡ್ರೈವಿಂಗೂ ಬರತ್ತಾ?'
'ಕಾರ್ ತೊಗೊಂಡ್ಮೇಲೆ ಕಲಿತೆ ಸಾರ್'
'ಯಾವ ಕಾರು? ಫಿಯಟ್ಟಾ, ಅಂಬಾಸಿಡರ್ರಾ, ಹೆರಾಲ್ಡಾ?'
'ಅವೆಲ್ಲಾ ಓಲ್ಡ್ ಮಾಡಲ್ಲು ಸಾರ್. ಇದೇ ನನ್ನ ಕಾರು'
ಟಾಟಾ ಸುಮೋ ಭಿಕ್ಷುಕನದು! ನನ್ನಲ್ಲಿ ಮಾರುತಿಯೂ ಇಲ್ಲ! ನನ್ನ ಕೊಶ್ಚೆನ್ ಮಾರ್ಕಿನಂತಹ ಆಕಾರವನ್ನು ನೋಡಿ, ನಗುತ್ತಾ ಅವನೇ
'ನಾನು ಮಾರ್ಕೆಟ್ ಎಂಟ್ರೆನ್ಸ್ಲೇ ಕೂತ್ಕೋತಿದ್ನಲ್ಲಾ ಸಾರ್, ಆ ಜಾಗ 15 ಲಕ್ಷ ಗುಡ್ ವಿಲ್ ಗೆ ಬಿಟ್ಕೊಟ್ಟೆ. ಹತ್ತಕ್ಕೆ ಕಾರ್, ಐದು ಡಿಫಾಸಿಟ್ಟೇ ಪೆಟ್ರೋಲ್' ಎಂದು ಎಕ್ಸ್ಪ್ಲೇಯ್ನಿಸಿದ.
'ಮತ್ತೆ ಭಿಕ್ಷೆ ಯಾಕೆ ಬೇಡ್ತೀಯಾ?'
'ಫ್ಯಾಮಿಲಿ ಬಿಸಿನೆಸ್ ಸಾರ್'!
'ಅಂದ್ರೆ?'
'ನಮ್ಮಪ್ಪ ಪಾರ್ಲಿಮೆಂಟ್ ಮುಂದೆ ಭಿಕ್ಷೆ ಬೇಡ್ತಾನೆ, ಅಮ್ಮ ರೇಸ್ ಕೋರ್ಸ್ ಮುಂದೆ. ಅಣ್ಣ ತಾಜ್ ಬಾರ್ ಮುಂದೆ. ನೀವೇನೇ ಅನ್ನಿ ಸಾರ್, ಕುಡುಕರು ಕೊಡೋವಷ್ಟು ಭಿಕ್ಷೆ ಇನ್ಯಾರೂ ಕೊಡಲ್ಲ ಸಾರ್'
ಸುಮ್ಮನಿರಬೇಕಿತ್ತು. ಇರಲಿಲ್ಲ. 'ಕಡಿಮೆ ಕೊಡುವವರು?' ಎಂದೆ.
'ಸಾಯ್ತಿಗ್ಳು ಸಾರ್. ಪಾಪ! ಅವರಿಗೇ ತಿನ್ನಕ್ಕೆ ಇರತ್ತೋ ಇಲ್ವೋ... ಕೆಲವರು ಕಾಗದ ತಿಂದು ಇಂಕ್ ಕುಡಿದು ಜೀವ್ನ ಮಾಡ್ತಾರಂತೆ ಹೌದಾ ಸಾರ್?'
ಅಷ್ಟರಲ್ಲಿ ಕಾರ್ಯಕ್ರಮದ ಸ್ಥಳ ಬಂದದ್ದರಿಂದ ಉತ್ತರಿಸುವುದು ತಪ್ಪಿತು.
ಕಾರಿನಿಂದಿಳಿದೆ. ಅಮೋಘವಾದ 'ಭಿಕ್ಷುಕರ ಭವನ' ಎಂಬ ಕಟ್ಟಡ ಕಂಡು ಮೂಕವಿಸ್ಮಿತನಾದೆ.
'ಇದೆಲ್ಲಾ ಹೇಗೆ?'
'ಪಿಡಬಲ್ ಯೂಡೀ ಕಂತ್ರಾಟುಗಳವರು ಇಟ್ಟಿಗೆ, ಸಿಮೆಂಟು, ಕಬ್ಬಿಣ ಎಲ್ಲ ಭಿಕ್ಷೆ ಕೊಟ್ರು ಸಾರ್'
'ಸರಿ. ಸೈಟು?'
'ಐವತ್ತು ಸಾವಿರ ಭಿಕ್ಷುಕರ ಓಟ್ ಹಾಕ್ಸಿದೆ ಸಾರ್. ಮಂತ್ರಿಗೋಳ್ಳೇ ಓಡಾಡಿ ಸೈಟ್ ಮಾಡಿಸಿಕೊಟ್ರು'
'ಐವತ್ತು ಸಾವಿರ ಭಿಕ್ಷುಕರಿದ್ದಾರೇನಯ್ಯ ನಮ್ಮ ಸಿಟೀಲಿ?'
'ಇಪ್ಪತ್ತೇ ಸಾವಿರ ಸಾರ್. ಕೆಲವರು ಎರಡು ಕಡೆ, ಕೆಲವರು ಮೂರು ಕಡೆ ಹಾಕಿದರು'
ವೆರಿ ಗುಡ್ ಎಂದುಕೊಂಡೆ. ಒಂದು ಓಟನ್ನೂ ಹಾಕದ ವಿದ್ಯಾವಂತರಿಗಿಂತ ಮೂರು ಓಟು ಹಾಕುವ ಭಿಕ್ಷುಕರೇ ವಾಸಿ!!!
ಭವನದೊಳಗೆ ಕಾಲಿರಿಸಿದೆ. ಮತ್ತಷ್ಟು ಅಚ್ಚರಿ ಕಾದಿತ್ತು.
ಭವನದಲ್ಲಿನ ಆಸನಗಳು ಅತ್ಯಂತ ಶ್ರೇಷ್ಠ ಮಟ್ಟದ್ದಾಗಿದ್ದವು. ಅಲ್ಲಿದ್ದ ಮೈಕ್ ಸಿಸ್ಟಮ್ ನಷ್ಟು ಉತ್ಕೃಷ್ಟವಾದ ಮೈಕ್ ಸಿಸ್ಟಮ್ಮನ್ನು ನಾನು ಅದುವರೆಗೂ ಎಲ್ಲೂ ಕಂಡಿರಲಿಲ್ಲ.
'ಆಸನಗಳು ವಿಧಾನಸೌಧ ಮತ್ತು ಪಾರ್ಲಿಮೆಂಟಿನವು. ಮೈಕೂ ಅಷ್ಟೆ' ಹೇಳಿದ ಭಿಕ್ಷುಕ.
'ಹೇಗೆ?'
'ಸದನದಲ್ಲಿ, ಪಾರ್ಲಿಮೆಂಟಿನಲ್ಲಿ ಮಂತ್ರಿಗಳು ಜಗಳ ಆಡುವಾಗ ಒಬ್ಬರು ಇನ್ನೊಬ್ಬರತ್ತ ಬಿಸಾಡುವ ರಭಸದಲ್ಲಿ ಕೆಲವನ್ನು ಹೊರಕ್ಕೂ ಎಸೆದುಬಿಡುತ್ತಾರೆ. ಅಲ್ಲಿಯೇ ಇರುವ ನಮ್ಮ ಭಿಕ್ಷುಕತಂಡ ಅವನ್ನು ಕ್ಯಾಚ್ ಹಿಡಿದು ತಂದು ಇಲ್ಲಿಗೆ ಹಾಕಿವೆ' ಹೆಮ್ಮೆಯಿಂದ ಉಲಿದ ಭಿಕ್ಷುಕರ ಸಂಘದ ಅಧ್ಯಕ್ಷ.

ಕಾರ್ಯಕ್ರಮ ಸಾಂಗವಾಗಿ ನೆರವೇರಿತು. 'ಊಟ ಮಾಡಿಯೇ ಹೋಗಬೇಕು' ಎಂದನವ. ಹೊಟ್ಟೆ ಹಸಿದಿತ್ತು. ತಲೆ ಆಡಿಸಿದೆ. ಅಡಿಗೆಯವನು ಒಂದೊಂದಾಗಿ ಐಟಂಗಳನ್ನು ಬಡಿಸಿಕೊಂಡುಬಂದ. ಏಳೆಂಟು ಬಗೆಯ ಸಿಹಿತಿನಿಸುಗಳು, ಐದಾರು ಬಗೆಯ ಖಾರದ ತಿಂಡಿಗಳು, ಚೂರುಚೂರು ಹಪ್ಪಳಗಳು ಎಲ್ಲವೂ ಇದ್ದವು. ಮೇಯ್ನ್ ಕೋರ್ಸ್ ಆಗಿ ಬಿಸಿಬೇಳೆಭಾತ್ ಬಡಿಸಿದ.

ಅಥವಾ ನಾನು ಹಾಗೆಂದುಕೊಂಡೆ.

ಆ ಬಿಸಿಬೇಳೆಭಾತ್ ನಂತಹ ಅನ್ನದಮಿಶ್ರಣ ವಿಚಿತ್ರವಾಗಿತ್ತು. ಸಾರು, ರಸಂ, ಸಾಂಬಾರು, ಹುಳಿ, ಮಜ್ಜಿಗೆಹುಳಿ, ಎಲ್ಲವೂ ಸೇರಿಸಿದಂತಿತ್ತು. ರುಚಿಯಿದ್ದುದರಿಂದಲೋ, ಹಸಿವಾಗಿದ್ದುದರಿಂದಲೋ, ಸಕಲವನ್ನೂ ಪೊಗದಸ್ತಾಗಿ ಖಾಲಿ ಮಾಡಿ 'ಊಟ ಎಲ್ಲಿಂದ ತರಿಸಿದ್ದು?' ಎಂದೆ. ಕೇಳಬಾರದಿತ್ತು.

'ನಮ್ಮವರೇ ಬೆಳಗ್ಗೆಯಿಂದ ಎಲ್ಲ ಮದುವೆಮನೆಗಳ ಹಿತ್ತಲಿನಿಂದಲೂ ಆಯ್ದುಕೊಂಡುಬಂದದ್ದು ಸಾರ್. ಲಾಡು ಲಕ್ಷ್ಮಿ ಕಲ್ಯಾಣಮಂಟಪದ್ದು, ಮೈಸೂರುಪಾಕ್ ಜೈನ್ ಮಂದಿರದ್ದು, ರಸಗುಲ್ಲಾ ಮಾರ್ವಾಡಿ ಭವನ್ ದು....' ಹೇಳುತ್ತಾ ಸಾಗಿದ.

'ಬಿಸಿಬೇಳೆಭಾತ್?'

'ಹ್ಹ! ಅದು ಮಾತ್ರ ಹೋಮ್ ಮೇಡ್'

'ಅಂದರೆ?'

'ಎಲ್ಲಾ ಮನೆಗಳಿಂದಲೂ ಭಿಕ್ಷೆ ಬೇಡಿ ತಂದುದರ ಮಿಶ್ರಣ. ತಂಗಳು, ಪಂಗಳು, ಎಂಜಲು.....' ಹೇಳುತ್ತಾ ಸಾಗಿದ.

ಉದರದಿಂದ ತಿಂದದ್ದೆಲ್ಲಾ ವಿರೋಧಪಕ್ಷದ ನಾಯಕ ಸಭಾತ್ಯಾಗ ಮಾಡುವೋಪಾದಿಯಲ್ಲಿ ಹೊರಬರಲು ಹವಣಿಸಲು ಆರಂಭಿಸಿದವು. ಮುಖ ಠೇವಣಿ ಕಳೆದುಕೊಂಡ ಮಂತ್ರಿಯಂತಾಯಿತು.

ಇದಾಗಿ ಒಂದು ತಿಂಗಳಾಗಿದೆ. ಭೀಕರ ಫುಡ್ ಪಾಯ್ಸನಿಂಗ್ ಅಂತೆ. ಉಳಿಯುವುದು ಕಷ್ಟವಂತೆ. ಬೆಡ್ ನಲ್ಲೇ ಬಿದ್ದಿದ್ದೇನೆ. ಮಂಪರಿಗೆ ಹೋದಾಗಲೆಲ್ಲಾ 'ಯಜಮಾನ್ರೇ...' ಎಂಬ ನೈಸ್ ರಸ್ತೆಯಲ್ಲಿ ಒಟ್ಟಿಗೆ ಲಾರಿಗಳು ಸದ್ದು ಮಾಡಿದಾಗ ಬರುವ ಸದ್ದಿನಂತಹ ಸದ್ದು ಕೇಳಿದಂತಾಗಿ ಬೆಚ್ಚಿಬೀಳುತ್ತಿದ್ದೇನೆ.

ಆದರೆ.... ನಾನೊಂದು ಬಗೆದರೆ ಪತ್ನಿಯೊಂದು ಬಗೆದಿದ್ದಾಳೆ.

ನಜ್ಜುಗುಜ್ಜಾಗಿರುವ ಅಲ್ಯುಮಿನಿಯಮ್ ಪಾತ್ರೆಯೊಂದನ್ನು ಕೊಂಡುತಂದಿದ್ದಾಳೆ.

'ನಿಮ್ಮ ಭಾಷಣಕ್ಕಿಂತ 'ಅಮ್ಮಾ...ತಾಯೀ...' ಎಂದು ಕೂಗಿಯೇ ಹೆಚ್ಚು ಸಂಪಾದಿಸಬಹುದು. ಈಗ್ಲಾದ್ರೂ ತಿಳ್ಕೊಳ್ಳಿ' ಎನ್ನುತ್ತಿದ್ದಾಳೆ.

ಏನೇನು ಗ್ರಹಚಾರಗಳು ಕಾದಿವೆಯೋ ಏನೋ..... ▪



ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: **horanadachilume@gmail.com**

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ವ್ಯಾಪರ ಬುದ್ಧಿ

ಕನಕಾಪುರ ನಾರಾಯಣ

ಚೀನಾದ ನಗರದಲ್ಲಿ ಚಾಂಗ್ ಮತ್ತು ವಾಂಗ್ ಎಂಬ ಇಬ್ಬರು ಯುವಕರು ವ್ಯಾಪಾರ ಸೇಲ್ಸ್‌ಮನ್ ಆಗಿ ಕೆಲಸಕ್ಕೆ ಸೇರಿದರು.ಸ್ವಲ್ಪ ದಿನಕ್ಕೆ ವಾಂಗ್ ತನ್ನ ಅಧಿಕಾರಿಯಿಂದ ಮೆಚ್ಚುಗೆ ಪಡೆದು ಪ್ರಗತಿ/ಪ್ರಮೋಶನ್ ಕೂಡಾ ಗಿಟ್ಟಿಸಿಕೊಂಡನು.ಚಾಂಗ್ ಅದನ್ನು ಕಂಡು ಸಹಿಸದೆ ತನ್ನ ಅಧಿಕಾರಿಯನ್ನು ವಿಚಾರಿಸಿದನು. ಅದಕ್ಕೆ ಇಬ್ಬರಿಗೂ ಒಂದು ಪುಟ್ಟ ಪರೀಕ್ಷೆ ಕೊಟ್ಟನು.ಇಬ್ಬರೂ ಹೋಗಿ ಹಲಸಿನ ಹಣ್ಣಿನ ವ್ಯಾಪಾರದ ಬಗ್ಗೆ ಮಾಹಿತಿ ಪಡೆದು ಬರಲು ಹೇಳಿದ.ಚಾಂಗ್ ಮೊದಲು ಹೋಗಿ ಕಿಲೋಗೆ 12 ಡಾಲರ್ ಎಂದು ತಿಳಿದು ಬಂದ.ಆಗ ಅಧಿಕಾರಿ ವಾಂಗ್ ನನ್ನು ಕಳುಹಿಸಿ ಅವನ ವಿಚಾರಣೆ ಹೇಗಿದೆ ಎಂದು ತಿಳಿಯುವಾಗ ಚಾಂಗ್ ನನ್ನೂ ಪಕ್ಕದಲ್ಲಿರಲು ಹೇಳಿದ.ವಾಂಗ್ ವ್ಯವಹಾರದ ವಿವರ ನೀಡಿದ"ಬಾಸ್ ಮಾರುಕಟ್ಟೆಯಲ್ಲಿ ಇಬ್ಬರು ಮಾತ್ರ ಹಲಸಿನ ಹಣ್ಣು ಮಾರುತ್ತಿದ್ದಾರೆ, ಕಿಲೋಗೆ 12ಡಾಲರ್, 10ಕ್ಕೆ 100ಡಾಲರ್,ಒಬ್ಬೊಬ್ಬರೂ 300 ಹಣ್ಣು ತಂದಿದ್ದಾರೆ,ಮೇಜಿನ ಮೇಲೆ 30 ಹಣ್ಣು ಜೋಡಿಸಿದ್ದಾರೆ,ಒಂದೊಂದು ಹಣ್ಣು 15 ಕಿಲೋ ತೂಕವಿದೆ,ಅವರು ದಕ್ಷಿಣದ ರಾಜ್ಯದಿಂದ ಅವನ್ನು ತಂದಿದ್ದಾರೆ.ತಂದು ಎರಡು ದಿನ ಆಗಿದೆ.ಹಣ್ಣುಗಳು ಒಂದು ವಾರ ಕೆಡುವುದಿಲ್ಲ.ದಿನಕ್ಕೆ40 ರಿಂದ 50 ಹಣ್ಣು ಮಾರಾಟ ಮಾಡುತ್ತಾರೆ. ಇದನ್ನು ಕೇಳಿ ಚಾಂಗ್ ಗೆ ನಾಚಿಕೆಯಾಯಿತು ರಾಜಿನಾಮೆ ಕೊಡುವುದರ ಬದಲು ವಾಂಗ್ ನಿಂದ ಬುದ್ಧಿ ಕಲಿತು ಮುನ್ನಡೆದ.▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"



ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಕ್ಯಾರೆಟ್ ಚಟ್ನಿ

ಬೇಕಾಗುವ ಸಾಮಗ್ರಿಗಳು

- ಕ್ಯಾರೆಟ್ ಅರ್ಧ ಕಿಲೋ
- ಅರ್ಧ ತೆಂಗಿನ ಕಾಯಿ ತುರಿದದ್ದು
- ಹಸಿ ಮೆಣಸಿನಕಾಯಿ ಹತ್ತು
- ಉಪ್ಪು ಒಂದು ಟೀ ಚಮಚ
- ಹುಣಸೇ ಹಣ್ಣು ನಿಂಬೆ ಗಾತ್ರ
- ಕೊತ್ತಂಬರಿ ಸೊಪ್ಪು ಒಂದು ಕಟ್ಟು
- ವಗ್ಗರಣೆಗೆ ಸ್ವಲ್ಪ ಎಣ್ಣೆ ಕರಿಬೇವು, ಸಾಸಿವೆ, ಇಂಗು, ಉದ್ದಿನಬೇಳೆ

ಮಾಡುವ ವಿಧಾನ

- ಕ್ಯಾರೆಟ್ ತೊಳೆದು ತುರಿದಿಟ್ಟುಕೊಳ್ಳಿ
- ತುರಿದ ಕ್ಯಾರೆಟ್,ಹುಣಸೇಹಣ್ಣು ಹಾಗೂ ಮಿಕ್ಕಎಲ್ಲಾ ಸಾಮಾನಿನ ಜೊತೆ ಸೇರಿಸಿ ಅರ್ಧಲೋಟ ನೀರು ಬೆರೆಸಿ ರುಬ್ಬಿಕೊಳ್ಳಿ
- ರುಬ್ಬಿದ ಮಿಶ್ರಣಕ್ಕೆ ವಗ್ಗರಣೆ ಹಾಕಿ, (ಚಪಾತಿ ದೋಸೆ ಜೊತೆ ತಿನ್ನಲು ರುಚಿ)

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಇದೇನ್ಲಾ ಇದು

೧. ಒಂದು ಕಂಬಕ್ಕೆ ನಾಲ್ಕು ಕಿವಿ
೨. ಹೊಕ್ಕಿದ್ದು ಒಂದಾಗಿ, ಹೊರಟಿದ್ದು ಹತ್ತಿಪ್ಪತ್ತಾಗಿ

ಉತ್ತರಕ್ಕೆ ಪುಟ ೧೩ ನೋಡಿ

... ಗೆ

ನಿನ್ನ ಒಲವಿಗೆ ನಿನ್ನ ಚೆಲುವಿಗೆ
ಬಾಗಿ ತೂಗಿದೆ ಲತೆಗಳು
ನೀರನೆರೆದಿಹ ನಿನ್ನ ಕೈಯನು
ಬಳಸಿ ಹಿಡಿದಿದೆ ಮುದದೊಳು

ಸುಳಿವ ಗಾಳಿಯು ನಿನ್ನ ಹೆರಳನು
ಬಿಡದೆ ಕಾಡಿಸಿ ತೂಗಿದೆ
ಬೆಳ್ಳಿ ಚಂದ್ರನ ಒಳ್ಳೆ ಬೆಳಕದು
ನಲ್ಲೆ ನಿನ್ನನು ಬೆಳಗಿದೆ

ಅಲ್ಲೇ ಅರಳಿಹ ಚೆಂಗುಲಾಬಿಯು
ನಿನ್ನ ಚೆಲುವಿಗೆ ಹೋಲಿಕೆ
ಬಳ್ಳಿ ತುಂಬಾ ಮೊಲ್ಲೆ ಹೂಗಳು
ನಿನಗೆ ಆಗಿದೆ ಮಾಲಿಕೆ

ನನ್ನ ಬಾಳಲಿ ಚಿತ್ರದಂತಹ
ನಿನ್ನ ಹೆಜ್ಜೆಯ ಗುರುತಿದೆ
ಮನೆಯೆ ದೇಗುಲ ನೀನೆ ದೇವತೆ
ಎಂಬ ನಂಬಿಕೆ ತರುತಿದೆ

ಎಲ್ಲೋ ದೂರದಲೊಬ್ಬ ಬಾಲಕ
ನುಡಿಸಿ ರಾಗವ ಕೊಳಲಲಿ
ನಿನ್ನ ಹೊಗಳುವ ಎಲ್ಲ ಪದಗಳ
ಉಳಿಸಿ ಹೋದನು ಕೊರಳಲಿ

ರಚನೆ: ಮಾಲು, ಅಡಿಲೇಡ್

ಹಾಸ್ಯ ಚಿಲುಮೆ

ತಿಮ್ಮ:ಜೀವನದಲ್ಲಿ ಏನು ಆಗ್ಬೇಕು ಅಂದ್ಕೊಂಡಿದ್ದೀಯಾ?
ಗುಂಡ: ನಾನೂ ನನ್ನ ತಂದೆಯಂತೆ ಡಾಕ್ಟರ್ ಆಗ್ಬೇಕೂ ಅಂದ್ಕೊಂಡಿದ್ದೀನಿ.

ತಿಮ್ಮ:ಹಾಗಾದ್ರೆ ನಿನ್ನ ತಂದೆ ಡಾಕ್ಟರಾ?
ಗುಂಡ:ಇಲ್ಲಾ ಅವರೂ ಡಾಕ್ಟರ್ ಆಗ್ಬೇಕೂ ಅಂದ್ಕೊಂಡಿದ್ರಂತೆ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಜಾಣ ಕರ್ನಾಟಕ

೧. ಭಾರತದ ರಾಷ್ಟ್ರಧ್ವಜವನ್ನು ತಯಾರಿಸಲು ಭಾರತ ಸರ್ಕಾರದಿಂದ ಅಧಿಕೃತವಾಗಿ ಅನುಮತಿ ಪಡೆದಿರುವ ಏಕೈಕ ಸಂಸ್ಥೆ ಯಾವುದು? ಇದು ಎಲ್ಲಿದೆ?

೨. ಡಿಸೆಂಬರ್ ೨೦೦೯ ರಲ್ಲಿ ಗುಲ್ಬರ್ಗ ಜಿಲ್ಲೆಯಿಂದ ವಿಭಜನೆಯಾಗಿ ರೂಪಿತವಾದ, ಹೊಸ ಜಿಲ್ಲಾ ಕೇಂದ್ರ ಯಾವುದು? ಇದು ಕರ್ನಾಟಕದ ಎಷ್ಟನೆಯ ಜಿಲ್ಲೆ ಎನಿಸಿಕೊಂಡಿತು?

ಸರಿ ಉತ್ತರಕ್ಕೆ ಪುಟ ೧೬ ನೋಡಿ

ಇದೇನ್ಲಾ ಇದು – ಉತ್ತರ
೧. ಲವಂಗ
೨. ಶಾವಿಗೆ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ಐದು ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ತನ್ನನ್ನು ತಾನೇ ಕೊಟ್ಟುಕೊಳ್ಳುವವಳು ಅಪರ್ಣ ಳನ್ನು ಹೋಲುತ್ತಾಳಲ್ಲ.

೨. ಬರಹ ಸರಿಯಿಲ್ಲವೆಂದು ಚಚ್ಚಿಕೊಳ್ಳಲು ಸುಲಭವಾಗಿ ಸಿಗುವ ಜಾಗ.

೩. ಯಮನಿಗೂ, ತಾಳ್ಮೆಗೂ, ಸಂಬಂಧ ಉಂಟೇ?

೪. ಆತುರ ಪಡಬೇಡಿ, ಭಗ್ನಗೊಳಿಸುತ್ತಿಲ್ಲ, ಕೇವಲ ಅರಿಕೆ ಮಾಡಿಕೊಳ್ಳುತ್ತಿದ್ದೀವಷ್ಟೆ.

೫. ಅವನನ್ನು "ನೀನು ಕೀಟಲೆ ಬುದ್ಧಿಯವ" ಎಂದು ಕರೆದರೆ, "ತನ್ನಿ" ಎನ್ನುವುದೇ!

ಉತ್ತರ: ತೇರೆಳೆದಾದ ಮೇಲೆ ದೇವಾಲಯದಲ್ಲಿ ನಡೆಯುವ ಭರ್ಜರಿ ಭೋಜನ ಕೂಟ.

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಡಿಸೆಂಬರ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ನವೆಂಬರ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದ ಅನೇಕ ಜನರಿಗೆ ನಮ್ಮ ಧನ್ಯವಾದಗಳು. ಅವರ ಪೈಕಿ ಎಲ್ಲಾ ಸರಿ ಉತ್ತರ ಕಳುಹಿಸಿರುವ ಇವರಿಗೆ ನಮ್ಮ ಅಭಿನಂದನೆಗಳು.

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಬಿ.ಆರ್. ವತ್ಸಲಾ ದ್ವಾರಕನಾಥ್, ಕೆ.ಜಿ.ಎಫ್
- ಪುಷ್ಪವಲ್ಲಿ ಚಂದ್ರಶೇಖರ್, ಕೆಂಗೇರಿ
- ಚಂದ್ರಿಕ ಉದಯ್, ಸಿಡ್ನಿ
- ರಾಜಿ ಜಯದೇವ್, ಸಿಡ್ನಿ

ನವೆಂಬರ್ ತಿಂಗಳ ಪದಪುಂಜದ ಉತ್ತರ

೧. ಉತ್ತಮ ನಿವಾಸವೆ ದೊರಕಿತಲ್ಲ ಈತನಿಗೆ. ಒಂದು ಹಿಡಿ ಅವಲಕ್ಕಿ ನೀಡಿದ್ದಕ್ಕೆ

ಸು	ಧಾ	ಮ

೨. ರುದ್ರ ಭೀಕರಗಳಿಗಿಂತಲೂ ಭಯಾನಕವಾದುದು.

ಬೀ	ಭ	ತ್ಸ

೩. ನಾಚಿ ಕೆಂಪಾಗಿರುವ ಹೊಸ ಹೆಣ್ಣು. ಯಾರೀಕೆ?

ನ	ವ	ವ	ಧು

೪.ಅಬ್ಬ, ಕಿವಿಗೆ ಸಹಿಲಾರದಂತಹ ಘೋರ ಸದ್ದಿದು.

ಕ	ರ್ಣ	ಕ	ಠೋ	ರ

೫. ಗವಾಕ್ಷಿಯಲ್ಲಿ ಬಂದ ಪಿಶಾಚಿಯನ್ನು, ಈಗತಾನೆ ಏನೆಂದು ಕೇಳಿದ್ದಿರಿ

ಹೋ	ದೆ	ಯಾ

ಮಾಡಬೇಕಾದ ಪದ:

ಅರ್ಧ ಶತಮಾನ ಕಾಯಬೇಕಾಯಿತೇ. ಕೋಲಾರದದಿರಿನ ಈ ದೊಡ್ಡ ಹುಬ್ಬಕ್ಕೆ?

ಸು	ವ	ರ್ಣ	ಮ	ಹೋ	ತ್ಸ	ವ

NRI SEVA
Educational, Legal, financial, Health, Reality management services Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



ರಚನೆ: ಪುಷ್ಪವಲ್ಲಿ ಚಂದ್ರಶೇಖರ್, ಕೆಂಗೇರಿ ಉಪನಗರ & ದಿವ್ಯಶ್ರೀ.ಡಿ, ಕೆ.ಜಿ.ಎಫ್.

ಮೇಲೆ ಮತ್ತು ಕೆಳಗೆ: 6ಚುಕ್ಕಿ-5ಸರ್ತಿ, ಮಧ್ಯ:16ಚುಕ್ಕಿ-6ಸರ್ತಿ

ಲೇಖಕರು: ನಾಗಶೈಲ ಕುಮಾರ್

ಬಾದಾಮಿಯ ಚಾಲುಕ್ಯರು (ಕ್ರಿ.ಶ.೫೪೦ ರಿಂದ ಕ್ರಿ.ಶ.೭೫೩) : ಕನ್ನಡ ನಾಡನ್ನಾಳಿದ ರಾಜವಂಶಗಳಲ್ಲಿ ಬಾದಾಮಿಯ ಚಾಲುಕ್ಯ ವಂಶ ಬಲು ಪ್ರಮುಖಸ್ಥಾನ ಪಡೆದಿದೆಯೆಂದು ಹೇಳಬಹುದು. ರಾಜ್ಯದ ವಿಸ್ತೀರ್ಣದಲ್ಲಿ, ಆಡಳಿತದಲ್ಲಿ, ಕಲೆ, ಸಾಹಿತ್ಯ, ಧರ್ಮ, ಎಲ್ಲದರಲ್ಲಿಯೂ ಅವರು ಕನ್ನಡನಾಡಿನ ಹಿರಿಮೆಯನ್ನು ಕೇವಲ ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲೂ ಹರಡುವಂತೆ ಮಾಡುವುದರಲ್ಲಿ ಪ್ರಥಮರಾದರು. ಇನ್ನೂರಕ್ಕೂ ಹೆಚ್ಚು ವರ್ಷಗಳ ಕಾಲ ರಾಜ್ಯಭಾರ ನಡೆಸಿ, ಅಂದಿನ ಉತ್ತರ ಭಾರತದ ರಾಜವಂಶಗಳಿಗೆ ಪೈಪೋಟಿಯಾಗುವಂತಹ ಸಾಮ್ರಾಜ್ಯ ಕಟ್ಟಿದರು.

ಮೂಲತಃ ಕರ್ನಾಟಕದವರೇ ಎಂದು ಹೇಳಲಾಗಿರುವ ಇವರು, ಬನವಾಸಿಯ ಕದಂಬರನ್ನು ಸೋಲಿಸಿ ೫೪೦ರಲ್ಲಿ ಸ್ವತಂತ್ರ ರಾಜ್ಯ ಸ್ಥಾಪನೆ ಮಾಡಿದರು. ಕ್ರಿ ಶ ೫೪೩ ರಲ್ಲಿ ಬಾದಾಮಿಯ ಕೋಟೆಯನ್ನು ಕಟ್ಟಿದರು. ಮೊದಲ ದೊರೆ ಜಯಸಿಂಹ, ಅವನ ಮಗ ರಣರಾಗ ನಂತರ ಅವನ ಮಗ ಒಂದನೆಯ ಪುಲಕೇಶಿ. ಈ ಒಂದನೆಯ ಪುಲಕೇಶಿ ಕದಂಬರನ್ನು ಸಂಪೂರ್ಣವಾಗಿ ಸೋಲಿಸಿ ಚಾಲುಕ್ಯ ಸಾಮ್ರಾಜ್ಯವನ್ನು ಬಲಪಡಿಸಿದ. ಅವನ ಮೊಮ್ಮಗ ಎರಡನೆಯ ಪುಲಕೇಶಿ ಚಾಲುಕ್ಯವಂಶದಲ್ಲಿಯೇ ಅತಿ ಪ್ರಸಿದ್ಧನಾದ ರಾಜ.

ಕ್ರಿ. ಶ. ೬೦೯ರಿಂದ ಕ್ರಿ.ಶ. ೬೪೨ ರವರೆಗೆ ರಾಜ್ಯಭಾರ ನಡೆಸಿದ ಎರಡನೆಯ ಪುಲಕೇಶಿ, ತನ್ನ ಅವಧಿಯ ಬಹುಪಾಲು ಸಮಯವನ್ನು ಯುದ್ಧಗಳನ್ನು ನಡೆಸುತ್ತಲೇ ಕಳೆದು, ನರ್ಮದೆಯಿಂದ ಕಾವೇರಿಯವರೆವಿಗೂ ರಾಜ್ಯವನ್ನು ವಿಸ್ತರಿಸಿದ. ಮೊದಲಿಗೆ ತನಗೆ ಮೋಸ ಮಾಡಲೆತ್ನಿಸಿದ ತನ್ನ ಚಿಕ್ಕಪ್ಪ ಮಂಗಳೇಶನನ್ನು ಸೋಲಿಸಿ, ನಂತರ, ಕದಂಬರು, ಆಳುಪರು, ಲಾಟ(ದಕ್ಷಿಣ ಗುಜರಾತ್), ಮಾಳವ, ಗೂರ್ಜರ, ಕಳಿಂಗ, ವೆಂಗಿ, ಹೀಗೆ ಎಲ್ಲೆಡೆಯೂ ಜಯಭೇರಿ ಬಾರಿಸಿದ. ಪಲ್ಲವರನ್ನು ಅಡಗಿಸಿ, ಚೋಳ ಕೇರಳ, ಪಾಂಡ್ಯರ ಸ್ನೇಹ ಮಾಡಿಕೊಂಡ. ಇವನ ಹಿರಿಮೆಯೆಂದರೆ ಉತ್ತರಾಧಿಪತಿಯೆನಿಸಿದ್ದ ಕನೋಜದ ಹರ್ಷವರ್ಧನನನ್ನು ಸೋಲಿಸಿದ್ದು. ನೌಕಾಬಲವನ್ನು ಬಳಸಿ ಕೊಂಕಣದ ಮೌರ್ಯರ ರಾಜಾಪುರಿಯನ್ನುಗೆದ್ದ. ಇವನ ವಿಜಯಯಾತ್ರೆಗಳ ದಾಖಲೆಗಳು ಐಹೊಳೆಯ ಶಾಸನಗಳಲ್ಲಿ ದೊರಕಿವೆ. ತನ್ನ ಜಯಭೇರಿಗಳಿಂದಾಗಿ ಇವನು ಪರಮೇಶ್ವರ ಎಂಬ ಬಿರುದನ್ನು ಗಳಿಸಿದ್ದ. ಇವನ ಕಡೆಗಾಲದಲ್ಲಿ ಬಾದಾಮಿಯು ಪಲ್ಲವರ ವಶವಾಯಿತು. ಆ ಸಮಯದಲ್ಲಿ ಇವನು ಮರಣ ಹೊಂದಿದ.

ಪುಲಕೇಶಿಯ ಮೂರನೆಯ ಮಗ ವಿಕ್ರಮಾದಿತ್ಯ, ಪಲ್ಲವರಿಂದ ಮತ್ತೆ ರಾಜ್ಯವನ್ನು ವಶ ಪಡಿಸಿಕೊಂಡು, ಇನ್ನೊಮ್ಮೆ ಚಾಲುಕ್ಯರ ಪ್ರಾಬಲ್ಯವನ್ನು ಮೆರೆಸಿದ. ೬೫೫ ರಿಂದ ೬೮೨ ರವರೆಗೆ ರಾಜ್ಯಭಾರ ನಡೆಸಿದ ಇವನ ಕಾಲವೂ ಯುದ್ಧಗಳಲ್ಲಿಯೇ ಕಳೆಯಿತು. ಇವನ ಮಗ ವಿನಯಾದಿತ್ಯ (೬೮೧-೬೯೬) ನಂತರ ವಿನಯಾದಿತ್ಯನ ಮಗ ವಿಜಯಾದಿತ್ಯರೂ ಚಾಲುಕ್ಯರಲ್ಲಿ ಬಲು ಪ್ರಮುಖರಾದ ಅರಸರುಗಳು. ವಿಜಯಾದಿತ್ಯನಂತೂ (೬೯೪-೭೩೪) ತಂದೆ ಹಾಗೂ ತಾತಂದಿರೊಡನೆ ಗಳಿಸಿದ ಯುದ್ಧಗಳ ಅನುಭವಗಳಿಂದ ಮಹಾನ್ ಪ್ರತಾಪಶಾಲಿಯಾಗಿ ಮೆರೆದ. ಪುಲಕೇಶಿ, ವಿಕ್ರಮಾದಿತ್ಯ, ವಿನಯಾದಿತ್ಯ, ವಿಜಯಾದಿತ್ಯ, ಇವರುಗಳ ಕಾಲದಲ್ಲಿ, ಚಾಲುಕ್ಯ ಸೇನೆ ಕರ್ನಾಟಕದ ಬಲವೆಂದೇ ಹೆಸರು ಪಡೆದಿತ್ತು.

ತಮ್ಮ ಬಹುಪಾಲು ಸಮಯವನ್ನು ಸಾಮ್ರಾಜ್ಯವನ್ನು ವಿಸ್ತರಿಸುವುದರಲ್ಲಿಯೇ ಕಳೆದ ಚಾಲುಕ್ಯರು ತಮ್ಮ ನಡುವೆಯೇ ಹೊಗೆಯಾಡುತ್ತಿದ್ದ, ಮಾಂಡಳೀಕರ ಕಡೆಗೆ ಗಮನ ಹರಿಸಲಿಲ್ಲ. ಮಾಂಡಳೀಕರಾಗಿ ಸಾಮ್ರಾಜ್ಯ ಕಟ್ಟಿದ್ದ ಇವರು ಮುಂದೆ ಮಾಂಡಳಿಕರಿಂದಲೇ ಸೋಲನ್ನನುಭವಿಸಿ ರಾಜ್ಯ ಕಳೆದುಕೊಳ್ಳಬೇಕಾಯಿತು. ಪಲ್ಲವರನ್ನು ಗೆದ್ದು ಪರಾಕ್ರಮಿಯೆನಿಸಿದ್ದ ಕೀರ್ತಿವರ್ಮನು ೭೫೩ ರಲ್ಲಿ ರಾಷ್ಟ್ರಕೂಟರಿಂದ ಪರಾಜಿತನಾಗಿ , ಬಾದಾಮಿಯ ಚಾಲುಕ್ಯರ ಆಳ್ವಿಕೆ ಕೊನೆಗೊಂಡಿತು.

ಧಾರ್ಮಿಕವಾಗಿ, ಚಾಲುಕ್ಯರು ಆರಂಭದಲ್ಲಿ ವೈಷ್ಣವರಾಗಿದ್ದು, ನಂತರ ಶೈವರಾದರು. ಜೈನ, ಬೌದ್ಧ ರಿಗೂ ಪ್ರಾಮುಖ್ಯತೆಯಿತ್ತಾದರೂ ಬೌದ್ಧ ಧರ್ಮ ಕ್ಷೀಣವಾಗುತಾ ಬಂದಿತ್ತು. ಚೈನೀ ಪ್ರವಾಸಿ, ಹ್ಯೂಯೆನ್ ತ್ಸಾಂಗ್ ಮತ್ತು ಪಾರ್ಸೀ ರಾಯಭಾರಿಗಳು ಇವರ ಆಸ್ಥಾನಗಳಿಗೆ ಭೇಟಿ ನೀಡಿದ್ದರು. ಅಲ್ಲದೆ ಚಾಲುಕ್ಯ ರಾಜ್ಯದಿಂದಲೂ ಚೀನಾ ದೇಶಕ್ಕೆ ಬೌದ್ಧ ಬಿಕ್ಷುಗಳು ತೆರಳಿದ್ದರು.

ಕಲೆ, ಸಂಗೀತ ಸಾಹಿತ್ಯಗಳಿಗೆ ಪ್ರೋತ್ಸಾಹವಿತ್ತು. ವೀಣೆ, ಕೊಳಲು, ಶಂಖ, ಡೋಲು ಮುಂತಾದ ಸಂಗೀತ ಸಾಧನಗಳನ್ನು ಬಳಸುತ್ತಿದ್ದ ಕುರುಹಿದೆ. ಪುಲಕೇಶಿಯ ಸೇನಾನಿಯಾಗಿದ್ದ ರವಿಕೀರ್ತಿಯು ಪಂಡಿತನೂ ಆಗಿದ್ದು, ತಾನು ಭಾರವಿ ಹಾಗು ಕಾಳಿದಾಸರಿಗೆ ಸರಿ ಸಮಾನನು ಎಂದು ಅವನೇ ಹೇಳಿಕೊಂಡಿದ್ದಾನೆ. ಅವರ ಬಹುಪಾಲು ಶಾಸನಗಳು ಕನ್ನಡದ್ದೇ ಆಗಿದೆ.

ಶಿಲ್ಪಕಲೆಯ ವಿಷಯದಲ್ಲಂತೂ ಚಾಲುಕ್ಯರು ಕರ್ನಾಟಕಕ್ಕೆ ಅನುಪಮ ಕೊಡುಗೆ ನೀಡಿದ್ದಾರೆ. ಇಂದೂ ನಾವು ಕಾಣುವ ದಕ್ಷಿಣ ಭಾರತದ ದೇಗುಲಗಳ ಶೈಲಿಗೆ ನಾಂದಿ ಹಾಡಿದ್ದೂ ಅಲ್ಲದೆ ಭದ್ರ ಬುನಾದಿ ಹಾಕಿದವರೂ ಚಾಲುಕ್ಯರೇ. ಮುಂದೆ ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ಹೊಯ್ಸಳ ಹಾಗೂ ವಿಜಯನಗರದ ವಂಶಗಳವರು ನಿರ್ಮಿಸಿರುವ ದೇವಾಲಯಗಳ ಕಲೆಗೆ ಇವೇ ಮಾದರಿಯಾಗಿವೆ. ಗುಹೆ ಕೊರೆದು ರಚಿಸಿದ ದೇವಾಲಯಗಳೂ ವಿಶಿಷ್ಟ ಶೈಲಿಯ ಕಟ್ಟಣೆಯ ದೇಗುಲಗಳೂ ಇವರ ಕೊಡುಗೆಯೇ ಆಗಿದೆ.ಶಿಲ್ಪ ಕಲೆಯ ತೊಟ್ಟಿಲೆಂದೇ ಕರೆಸಿ ಕೊಂಡಿರುವ ಐಹೊಳೆಯು ಕಲ್ಲು ಕೆತ್ತನೆಯ ಉಗಮ ಸ್ಥಾನದಂತಿದೆ. ಇದೊಂದು ಕಲಾ ಶಾಲೆಯಾಗಿದ್ದು, ಇಲ್ಲಿ ನಿರ್ಮಿಸಿರುವ ಹಲವಾರು ದೇವಾಲಯಗಳು ಮುಂದಿನ ಭರ್ಜರಿ ರಚನೆಗಳ ಮಾದರಿಯಾಗಿವೆ.

ಇನ್ನು ಗುಹಾ ರಚನೆಗಳ ಬಾದಾಮಿ, ಅನುಪಮ ಕಲೆಯ ಪಟ್ಟದ ಕಲ್ಲಿನ ದೇಗುಲಗಳಂತೂ ಚಾಲುಕ್ಯರ ಅಸಾಧಾರಣ ಕೊಡುಗೆ.

ರಾಷ್ಟ್ರಕೂಟರು (ಕ್ರಿ.ಶ.೭೫೩- ಕ್ರಿ.ಶ.೯೭೩): ಚಾಲುಕ್ಯರ ಮಾಂಡಲೀಕರಾಗಿದ್ದುಕೊಂಡಿದ್ದ ರಾಷ್ಟ್ರಕೂಟರ ದಂತಿದುರ್ಗ ೭೫೩ ರಲ್ಲಿ ಅವರನ್ನು ಸೋಲಿಸಿ, ರಾಷ್ಟ್ರಕೂಟ ಸಾಮ್ರಾಜ್ಯ ಸ್ಥಾಪಿಸಿದ. ಚಾಲುಕ್ಯ ಆಡಳಿತದ ಮುಂದುವರೆದ ಭಾಗದಂತಿದ್ದ ಇವರ ಆಳ್ವಿಕೆಯೂ ಕರ್ನಾಟಕ ಸಾಮ್ರಾಜ್ಯದ ವಿಸ್ತರಣೆ, ಯುದ್ಧಗಳಲ್ಲಿಯೇ ಕಳೆಯಿತು. ದಕ್ಷಿಣ ಭಾರತದಲ್ಲಿ ಇವರು ಕೂಡ ಪ್ರಭಾವಶಾಲಿಗಳಾಗಿ ಮೆರೆದು, ಕಲೆ, ಸಾಹಿತ್ಯಗಳಲ್ಲಿ ಅನುಪಮ ಕೊಡುಗೆ ನೀಡಿದ್ದಾರೆ. ಧ್ರುವ, ಗೋವಿಂದIII, ಅಮೋಘವರ್ಷ, ಇಂದ್ರ III, ಕೃಷ್ಣ III, ಇವರುಗಳು ಪ್ರಮುಖರಾದ ಅರಸುಗಳು.

ಕಲಿವಲ್ಲಭ, ಶ್ರೀವಲ್ಲಭ ಮುಂತಾಗಿ ಬಿರುದು ಪಡೆದಿದ್ದ ಧ್ರುವ ಉತ್ತರದ ಬಂಗಾಲದಿಂದ ಹಿಡಿದು ದಕ್ಷಿಣದ ಕಂಚಿಯವರೆವಿಗೂ ದಂಡಯಾತ್ರೆ ನಡೆಸಿ, ವಿಜಯಶಾಲಿಯಾಗಿದ್ದ. ಇವನ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ಅತ್ಯುಚ್ಚ ಸ್ಥಿತಿಯಲ್ಲಿತ್ತೆಂದು ಹೇಳಿದ್ದಾರೆ.ಅವನ ಮಗ ಗೋವಿಂದ III ಕೂಡ ಅತ್ಯಂತ ಸಮರ್ಥ ದೊರೆಯಾಗಿದ್ದ. ಗೋವಿಂದನ ಮಗ ಅಮೋಘವರ್ಷ ನಂತೂ ರಾಷ್ಟ್ರಕೂಟರ ಕೀರ್ತಿಪತಾಕೆಯನ್ನು ಹಾರಿಸಿದ ದೊರೆ. ಬಾಲಕನಾಗಿದ್ದಾಗಲೇ ಸಿಂಹಾಸನವೇರಿದ ಅಮೋಘವರ್ಷ ಅನೇಕ ಬಂಡಾಯಗಳನ್ನೆದುರಿಸ ಬೇಕಾಯಿತು. ಇವನು ವೆಂಗಿಯ ಚಾಲುಕ್ಯರು, ಗಂಗರು, ಪಲ್ಲವರ ಜೊತೆ ಯುದ್ಧಗಳನ್ನು ನಡೆಸಿ, ವೀರನಾರಾಯಣನೆಂಬ ಬಿರುದು ಗಳಿಸಿದರೂ ನಂತರದ ದಿನಗಳಲ್ಲಿ ಎಲ್ಲರೊಡನೆಯೂ ಸ್ನೇಹ ಬೆಳೆಸಿಕೊಂಡು ಬಂದನು. ಯುದ್ಧಕ್ಕಿಂತ ಅವನಿಗೆ ಶಾಂತಿಯ ಬಗ್ಗೆ ಹೆಚ್ಚಿನ ಒಲವಿತ್ತು ಎಂದು ಹೇಳಿದ್ದಾರೆ. ತನ್ನ ಕುಟುಂಬದಲ್ಲಿ ಗಂಗರು, ಪಲ್ಲವರು, ವೆಂಗಿಯ ಚಾಳುಕ್ಯರೊಡನೆ ವಿವಾಹ ಸಂಬಂಧಗಳನ್ನು ಬೆಳೆಸಿದ್ದನು. ನೃಪತುಂಗ, ಅತಿಶಯ ಧವಳ,ರಟ್ಟಮಾರ್ತಾಂಡ, ವೀರನಾರಯಣ ಶ್ರೀ ವಲ್ಲಭ ಎಂದೆಲ್ಲ ಬಿರುದು ಪಡೆದಿದ್ದ ಇವನು ತನ್ನ ಪ್ರಜೆಗಳ ಹಿತಕ್ಕಾಗಿ ತನ್ನ ಎಡಗೈ ಹೆಬ್ಬೆರಳನ್ನು ಕೊಲ್ಲಾಪುರದ ಮಹಾಲಕ್ಷ್ಮಿಗೆ ಬಲಿ ನೀಡಿದ್ದ. ಇವನ ಕಾಲದ ರಾಷ್ಟ್ರಕೂಟ ಸಾಮ್ರಾಜ್ಯವು ಅಂದಿನ ಜಗತ್ತಿನ ನಾಲ್ಕು ಮಹಾನ್ ಸಾಮ್ರಾಜ್ಯಗಳಲ್ಲಿ ಒಂದಾಗಿತ್ತೆಂದು ಪ್ರವಾಸಿಗ ಸುಲೇಮಾನ್ ಹೇಳಿದ್ದಾನೆ.

ಅಮೋಘವರ್ಷನ ನಂತರದ ದಿನಗಳಲ್ಲಿ ಇಂದ್ರIII ಮತ್ತು ಕೃಷ್ಣ III ಕೂಡ ಪ್ರಭಾವಶಾಲಿ ಅರಸುಗಳಾಗಿ ರಾಜ್ಯಭಾರ ನಡೆಸಿದರು. ನಂತರದ ದಿನಗಳಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯ ಅವನತಿಯತ್ತ ಸಾಗಿ ೯೭೩ ರ ಸುಮಾರರಲ್ಲಿ ಈ ಸಾಮ್ರಾಜ್ಯದ ಕೊನೆಯಾಯಿತು.

ರಾಷ್ಟ್ರಕೂಟರ ಕಾಲದಲ್ಲಿ ಕನ್ನಡಭಾಷೆಯ ಅಭಿವೃದ್ಧಿಗೊಂಡು, ಅರಸರು ಕನ್ನಡ ಭಾಷೆಯಲ್ಲಿ ಶಾಸನ ಹಾಗೂ ರುಜು ಮಾಡುವುದರಲ್ಲಿ ಆಸಕ್ತಿ ತೋರುತ್ತಿದ್ದರು. ಪಂಪನಂತಹ ಮಹಾಕವಿಯ ಕೃತಿಗಳ ರಚನೆಯಾಯಿತು. ಪಂಪನಷ್ಟೇ ಅಲ್ಲದೆ ಪೊನ್ನ, ತ್ರಿವಿಕ್ರಮ, ಅರಿಕೇಸರಿ, ಪದ್ಮಪಾದ, ಸುರೇಶ್ವರ ಮುಂತಾದ ಅನೇಕ ಕವಿಗಳಿಂದ ಅನೇಕ ಮಹತ್ವದ ಕೃತಿಗಳ ರಚನೆಯಾಯಿತು. ವೀರಸೇನ, ಜಿನಸೇನ, ಗುಣಭದ್ರ ಮುಂತಾದ ಗಣ್ಯ ಜೈನ್ ವಿದ್ವಾಂಸರಿದ್ದರು. ಪಂಪನು ಆದಿಪುರಾಣ, ಮತ್ತು ಕನ್ನಡದ ಮೊದಲ ಕಾವ್ಯ ಎನಿಸಿಕೊಂಡ ವಿಕ್ರಮಾರ್ಜುನ ವಿಜಯ ರಚಿಸಿ ಕನ್ನಡದ ನಾಡೋಜ ಮತ್ತು ಆದಿಕವಿ ಎನಿಸಿಕೊಂಡಿದ್ದಾನೆ. ಮತ್ತೊಂದು ಖ್ಯಾತ ಕನ್ನಡದ ಕೃತಿ ಕವಿರಾಜ ಮಾರ್ಗ ರಚಿಸಿದ್ದು ಅಮೋಘವರ್ಷ ನೃಪತುಂಗ ಎಂಬ ಹೇಳಿಕೆಯಿದ್ದರೂ, ವಾಸ್ತವವಾಗಿ ಅದನ್ನು ರಚಿಸಿದವನು ಅಮೋಘವರ್ಷನ ಆಸ್ಥಾನಿಕನಾದ ಶ್ರೀವಿಜಯ ನೆಂಬ ಕವಿ.

ರಾಷ್ಟ್ರಕೂಟರು ವೈದೀಕ ಧರ್ಮ ಪಾಲಿಸುತ್ತಿದ್ದರೂ, ಅವರ ಕಾಲದಲ್ಲಿ ಜೈನಧರ್ಮ ಅತ್ಯುಚ್ಚ ಸ್ಥಿತಿಯಲ್ಲಿತ್ತು. ಬೌದ್ಧರಿಗೆ ಕೂಡ ಪ್ರಾಶಸ್ತ್ಯವಿತ್ತು. ಅಷ್ಟೇ ಅಲ್ಲದೆ ಕರಾವಳಿಯ ಪ್ರಾಂತ್ಯಗಳಲ್ಲಿ ಮುಸ್ಲಿಮ್ ಅಧಿಕಾರಿಗಳನ್ನೂ ನಿಯೋಜಿಸಿದ್ದರು.

ರಾಷ್ಟ್ರಕೂಟರ ಕಾಲದಲ್ಲಿ ರಚನೆಯಾದ ದೇವಾಲಯಗಳಾಗಲೀ ಅವರ ಶೈಲಿಯೆಂದು ಹೇಳಿಕೊಳ್ಳುವ ರಚನೆಗಳಾಗಲೀ ಅಷ್ಟಾಗಿ ಇಲ್ಲ. ಆದರೆ ಅವರ ಕೊಡುಗೆಗಳಾದ ಮುಂಬೈ ಬಳಿಯ ಎಲಿಫೆಂಟಾ ಗುಹೆಗಳೂ, ಅಜಂತಾ ಎಲ್ಲೋರಾ ಗುಹೆಗಳೂ ಅವರ ಅದ್ವಿತೀಯ ನಿರ್ಮಾಣಗಳಾಗಿವೆ.

ವಿಜ್ಞಾನ

ರಾಕೆಟ್ ಸೈನ್ಸ್ !

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:



ಉದ್ದಕ್ಕೆ ಉದಬಹುದಾದ ಬಲೂನ್

೧೦-೧೫ ಅಡಿ ಉದ್ದದಷ್ಟು ಟ್ವೈನ್ ದಾರ

ಒಂದು ಪ್ಲಾಸ್ಟಿಕ್ ಸ್ಟ್ರಾ

ಅಂಟಿಸಲು ಸೆಲ್ಲೋಟೇಪ್

ವಿಧಾನ:

ದಾರವನ್ನು ಸ್ಟ್ರಾ ಒಳಗೆ ತೂರಿಸಿ ಎರಡು ಚೇರ್ ಗಳ ನಡುವೆ ದಾರವನ್ನು ಕಟ್ಟಿ

ಬಲೂನ್ ಅನ್ನು ಸಾಕಷ್ಟು ಉದಿ ಗಾಳಿ ಹೋಗದಂತೆ ಅದರ ತುದಿ ಹಿಡಿದುಕೊಂಡು ಸೆಲ್ಲೋ ಟೇಪ್ ಉಪಯೋಗಿಸಿ ಚಿತ್ರದಲ್ಲಿ ತೋರಿಸಿದಂತೆ ಸ್ಟ್ರಾ ಗೆ ಅಂಟಿಸಬೇಕು

ಬಲೂನ್ ತುದಿ ಬಿಡುತ್ತಿದ್ದಂತೆ ರಭಸವಾಗಿ ಬಲೂನ್ ಮುಂದೆ ಚಲಿಸುತ್ತದೆ

ಏನಾಗುತ್ತಿದೆ:

ಗಾಳಿಯು ಬಲೂನ್ ಒಳಗೆ ಒತ್ತಡದಿಂದ ಇರುತ್ತದೆ. ಬಲೂನ್ ತುದಿಯನ್ನು ಬಿಟ್ಟ ತಕ್ಷಣ ಇಡೀ ಗಾಳಿ ಒಮ್ಮೆಗೆ ಹೊರಬರಲು ಪ್ರಯತ್ನಿಸಿ ಮುಂಚಲನೆಯನ್ನು ಸೃಷ್ಟಿಸುತ್ತದೆ. ವಿಭಿನ್ನ ಗಾತ್ರದ ಮತ್ತು ಆಕಾರಗಳ ಬಲೂನ್ ಹೆಚ್ಚು ಅಥವಾ ಕಡಿಮೆ ಒತ್ತಡವನ್ನು ರಚಿಸುತ್ತದೆ. ನಿಜವಾದ ರಾಕೆಟ್ ನಲ್ಲಿ ಇಂಧನವನ್ನು ಉರಿಸಿ ಅದರಿಂದ ಒತ್ತಡ ಸೃಷ್ಟಿಸಿಲಾಗುತ್ತದೆ. ಈ ಒತ್ತಡವನ್ನು ಕೆಳಮುಖವಾಗಿ ಹೊರಹೋಗುವಂತೆ ರಚಿಸಿರುವುದರಿಂದ ರಾಕೆಟ್ ಮೇಲಕ್ಕೆ ಹೋಗುತ್ತದೆ. ▪

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಸಿಡ್ನಿ ಕನ್ನಡ ವಾಣಿ ಬಾನುಲಿ ಕಾರ್ಯಕ್ರಮ

(ವಿಚಾರ, ಸಂಗೀತ, ಪ್ರದೇಶ ಸಮಾಚಾರ, ವಾರ್ತೆ, ಸಂದರ್ಶನ, ಇತ್ಯಾದಿ, ಇತ್ಯಾದಿ)
ಪ್ರತಿ ಶನಿವಾರ 2 ರಿಂದ 3 ರವರೆಗೆ, 2RRR, FM 88.5 ತರಂಗಾಂತರದಲ್ಲಿ. ಕಾರ್ಯಕ್ರಮದಲ್ಲಿ ಭಾಗವಹಿಸುವ ಆಸಕ್ತಿಯುಳ್ಳವರು ಮತ್ತು ಹೆಚ್ಚಿನ ವಿವರಗಳನ್ನು ಬಯಸುವವರು ನಮ್ಮನ್ನು ಸಂಪರ್ಕಿಸಿ

ರಾಜ್ ನಟರಾಜನ್ ಮತ್ತು ಸಿಡ್ನಿ ಶ್ರೀನಿವಾಸ್ 0418 649 904 / 0402 375 275

Chinmaya Mission

Meet and Greet the New Year with
Vishnu Sahasranama Pooja & Archana

Date and Time : Thursday 1 Jan 2015 - 08:30 AM – 11:30 AM
Venue : 6 Boulton Avenue, Baulkham Hills

More Info : Contact Ashi on 02 9686 1994, Jagadish on 0414 703 151 or Dr Uma Jana on 9659 2614
Email : sydney@chinmaya.net.au

Kite Festival

Saturday Jan 10th 2015
10AM – 5PM

Jones Park Banks, Cornet of Pitt Street
Parramatta

0425 285 390
0420 781 160

ನಮ್ಮ
ಸುತ್ತಾ
ಮುತ್ತಾ

ಸಿಡ್ನಿ ಕನ್ನಡ ಶಾಲೆ - ವಾರ್ಷಿಕ ದಿನಾಚರಣೆ

ದಿನಾಂಕ 20-12-2014
ಮಧ್ಯಾಹ್ನ 3 ರಿಂದ 5 ರ ವರೆಗೆ
ಸ್ಥಳ : Wattlegrove Public School
Cressbrook Drive NSW 2173
ಮಕ್ಕಳಿಂದ ಕಲಾಪ್ರದರ್ಶನ, ಅತ್ಯುತ್ತಮ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಸಮಾರಂಭ
ಪ್ರವೇಶ - ಉಚಿತ

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.